ecpat International

ecpat TAIWAN 台灣展翅協會

# ಮಾರ್ಗಸೂಚಿಗಳು

## ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಕುರಿತು ನೈತಿಕ ಸಂಶೋಧನೆಗಾಗಿ

ಡಿಸೆಂಬರ್, 2019

ಈ ಪ್ರಕಟಣೆಯನ್ನು ಸ್ವೀಡಿಷ್ ಇಂಟರ್‌ನ್ಯಾಷನಲ್ ಡೆವೆಲಪ್‌ಮೆಂಟ್ ಕೋ-ಆಪರೇಷನ್ ಏಜೆನ್ಸಿ (ಸಿಡಾ) ಹಾಗೂ ದಿ ಓಕ ಫೌಂಡೇಷನ್‌ನ ಹಣಕಾಸು ಸಹಾಯದೊಂದಿಗೆ ಸಿದ್ಧಪಡಿಸಲಾಗಿದೆ.

ಈ ಯೋಜನೆಯನ್ನು ಸಾಧ್ಯಗೊಳಿಸುವ ಸಲುವಾಗಿ ಟೈವಾನ್ ರಿನೇಸಾನ್ಸ್ ಫೌಂಡೇಷನ್ ವತಿಯಿಂದ ಒದಗಿಸಲಾದ ಹಣಕಾಸಿನ ಬೆಂಬಲವನ್ನೂ ಈ ಸಂದರ್ಭದಲ್ಲಿ ಸ್ಮರಿಸುತ್ತಾ ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತೇವೆ.

ಇಲ್ಲಿ ವ್ಯಕ್ತಪಡಿಸಲಾಗಿರುವಂತಹ ನೋಟಗಳು ಕೇವಲ ಇಸಿಪಿಎಟಿ ಇಂಟರ್‌ನ್ಯಾಷನಲ್‌ನ ಅಭಿಪ್ರಾಯಗಳಾಗಿವೆ. ಈ ದಾನಿಗಳಿಂದ ದೊರೆತಂತಹ ಬೆಂಬಲದ ಕಾರಣದಿಂದಾಗಿ ಇಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಒಪ್ಪಿಕೊಂಡಿದೆ ಎಂದರ್ಥವಲ್ಲ.

ವಿನ್ಯಾಸ ಹಾಗೂ ಲೇಔಟ್:
**ಮನಿಡಾ ನೇಬ್ಕಲ್ಯಾಂಗ್**

ಈ ಕೈಪಿಡಿಯಲ್ಲಿರುವ ಮಾಹಿತಿಯನ್ನು ಕೇವಲ ಇಸಿಪಿಎಟಿ ಇಂಟರ್‌ನ್ಯಾಷನಲ್‌ನ ಅನುಮತಿ ಹಾಗೂ ಮಾಹಿತಿ ಮೂಲ ಹಾಗೂ ಇಸಿಪಿಎಟಿ ಇಂಟರ್‌ನ್ಯಾಷನಲ್‌ನ ಅನುಮೋದನೆಯೊಂದಿಗೆ ಮಾತ್ರ ಮರುಬಳಕೆ ಮಾಡಬಹುದು. ಈ ಕೈಪಿಡಿಯಿಂದ ತೆಗೆದುಕೊಂಡಿರುವಂತಹ ಮಾಹಿತಿಯನ್ನು ಬಳಸಿಕೊಂಡು ಪ್ರಕಟಿಸುವಂತಹ ಕೈಪಿಡಿ ಅಥವಾ ಸಾಮಗ್ರಿಯ ಒಂದು ಪ್ರತಿಯನ್ನು ಇಸಿಪಿಎಟಿಗೆ ಒದಗಿಸಬೇಕು.

ಸಲಹೆ ಮಾಡಿರುವಂತಹ ಉಲ್ಲೇಖ:
ಇಸಿಪಿಎಟಿ ಇಂಟರ್‌ನ್ಯಾಷನಲ್ (2019). ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಕುರಿತು ತಾತ್ವಿಕ ಸಂಶೋಧನೆಯ ಮಾರ್ಗಸೂಚಿಗಳು. ಬ್ಯಾಂಕಾಕ್: ಇಸಿಪಿಎಟಿ ಇಂಟರ್‌ನ್ಯಾಷನಲ್.

ಅನುವಾದ ಮತ್ತು ಲೇಔಟ್–**EQUATIONS**

©ECPAT International, 2019

ಪ್ರಕಟಣೆ:
**ಇಸಿಪಿಎಟಿ ಇಂಟರ್‌ನ್ಯಾಷನಲ್**
328/1 ಫಾಯಾ ತಾಯಿ ರಸ್ತೆ, ರಾಚಾಥೇವಿ,
ಬ್ಯಾಂಕಾಕ್, 10400, ಥಾಯ್‌ಲ್ಯಾಂಡ್
ದೂ: +662 215 3388 |www.ecpat.org | info@ecpat.org

## ಕೃತಜ್ಞತೆಗಳು

ಈ ಮಾರ್ಗಸೂಚಿಗಳು, ಚುಂಗ್ ಚೆಂಗ್ ಯೂನಿವರ್ಸಿಟಿ ಟೈವಾನ್, ಇಸಿಪಿಎಟಿ ಟೈವಾನ್ ಹಾಗೂ ಇಸಿಪಿಎಟಿ ಇಂಟರ್‌ನ್ಯಾಷನಲ್ ನಡುವೆ ಜಾರಿಯಲ್ಲಿರುವ ಸಂಯೋಜನಾ ಯೋಜನೆಯ ಫಲಿತಾಂಶವಾಗಿದೆ. ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ಕುರಿತ ಸಂಶೋಧನೆಗಳಲ್ಲಿ ನೈತಿಕ ಅಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಸುಧಾರಣೆ ತರಲು ಪಾಲುದಾರರು ಸರಣಿ ಚಟುವಟಿಕೆಗಳನ್ನು ನಡೆಸಲು ಬದ್ಧವಾಗಿದ್ದಾರೆ.

ಈ ಮಾರ್ಗಸೂಚಿಗಳನ್ನು ಇಸಿಪಿಎಟಿ ಸದಸ್ಯ ಸಂಸ್ಥೆಗಳು ಹಾಗೂ ಈ ಕೆಳಕಂಡ ಇತರರ ಕಾರ್ಯನಿರತ ಗುಂಪಿನಿಂದ ಅಭಿವೃದ್ಧಿಪಡಿಸಲಾಗಿದೆ:
**ಅಮಿ ಹುವೆ-ಲಿಂಗ್ ಶೀ** (ಚುಂಗ್ ಚೆಂಗ್ ಯೂನಿವರ್ಸಿಟಿ, ಟೈವಾನ್)
**ಮಾರ್ಕ್ ಕಪಲ್ಡಿ** (ಮಹಿಡಾಲ್ ಯೂನಿವರ್ಸಿಟಿ)
**ಯಿ-ಲಿಂಗ್ ಚೆನ್** (ಇಸಿಪಿಎಟಿ ಟೈವಾನ್)
**ಚಿಯಾ-ವೈ ಲಿನ್** (ಇಸಿಪಿಎಟಿ ಟೈವಾನ್)
**ಕ್ಯಾರ್ರಿ ವ್ಯಾನ್ ಡೆರ್ ಕ್ರೂನ್** (ಡಿಫೆನ್ಸ್ ಫಾರ್ ಚಿಲ್ಡ್ರನ್-ಇಸಿಪಿಎಟಿ, ನೆದರ್‌ಲ್ಯಾಂಡ್ಸ್)
**ತುಫೈಲ್ ಮುಹಮ್ಮದ್** (ಪಾಕಿಸ್ತಾನ್ ಪೀಡಿಯಾಟ್ರಿಕ್ ಅಸೋಸಿಯೇಷನ್)
**ಜೊಯಾತ್ರಿ ರೇ** (ಈಕ್ವೇಷನ್ಸ್, ಇಂಡಿಯಾ)
**ಬರಿಮಾ ಅಮಾನ್‌ಕ್ವಾಹ್** (ಜಿಎನ್‌ಸಿಆರ್‌ಸಿ, ಘಾನ)
**ಮೊರೆನಿಕೆ ಅಡೆಯಿ-ಒಮಾಯಿಬೊಯೆ** (ವುಮೆನ್ಸ್ ಕಾನ್ಸೋರ್ಷಿಯಂ ಆಫ್ ನೈಜೀರಿಯಾ)
**ಎರಿಕಾ ಜಾರ್ಜ್-ಮಾನ್ನಿ** (ಇಸಿಪಿಎಟಿ ಜರ್ಮನಿ)
**ಮಾರ್ಕ್ ಕವೆನಾಗ್** (ಇಸಿಪಿಎಟಿ ಇಂಟರ್‌ನ್ಯಾಷನಲ್)

2019ನೇ ಸಾಲಿನಲ್ಲಿ ಈ ಕೈಪಿಡಿಯ ಎರಡು ಕರಡುಗಳ ಕುರಿತು ವಿವರವಾದ ಹಿಮ್ಮಾಹಿತಿಯನ್ನು ಒದಗಿಸಿದಂತಹ ಅನೇಕ ಶೈಕ್ಷಣಿಕ ಹಾಗೂ ಕ್ಷೇತ್ರ ಕಾರ್ಯಕರ್ತ ತಜ್ಞರಿಗೂ ಸಹ ನಾವು ನಮ್ಮ ಧನ್ಯವಾದಗಳನ್ನು ಸಲ್ಲಿಸಲು ಬಯಸುತ್ತೇವೆ.

# ಪರಿವಿಡಿ


**ಪರಿಚಯ** **2**

**ಮಾರ್ಗದರ್ಶಕ ತತ್ವಗಳು** **3**

ಕ್ರಮ 1: ನಿಮ್ಮ ಸಂಶೋಧನೆಯಲ್ಲಿ ಮಕ್ಕಳನ್ನೂ ಸಹ ಸೇರ್ಪಡೆ ಮಾಡಿಕೊಳ್ಳಬೇಕೆ? 4

ಕ್ರಮ 2: ನೈತಿಕ ವಿಷಯಗಳು 5

1. ಅರ್ಥಪೂರ್ಣ ಮಕ್ಕಳ ಭಾಗವಹಿಸುವಿಕೆ 6
2. ಕ್ರಮಾನುಸರಣೆ ಪರಿಗಣನೆ 8
3. ತಿಳಿವಳಿಕೆಯುಳ್ಳ ಒಪ್ಪಿಗೆ 10
4. ಖಾಸಗಿತನ ಹಾಗೂ ಗೌಪ್ಯತೆ 12
5. ನಿಂದನೆ ಹಾಗೂ ಶೋಷಣೆಯ ಅನುಮಾನ ಹಾಗೂ ಬಹಿರಂಗಪಡಿಸುವಿಕೆ 14
6. ಪಾವತಿ ಹಾಗೂ ಪರಿಹಾರ 16
7. ಆಸಕ್ತಿಯ ಸಂಘರ್ಷಗಳು 18

ಕ್ರಮ 3: ತೊಂದರೆಗಳು ಹಾಗೂ ಪ್ರಯೋಜನಗಳ ವಿಶ್ಲೇಷಣೆ 20

ಕ್ರಮ 4: ಮೂರನೇ ಪಾರ್ಟಿ ಪುನರ್‌ಮನನ 21

**ಅನುಬಂಧ: ತೊಂದರೆಗಳು ಹಾಗೂ ಪ್ರಯೋಜನಗಳ ಕೋಷ್ಟಕ** **22**

# ಪರಿಚಯ

ಲೈಂಗಿಕ ಶೋಷಣೆಯ ವಿಷಯಕ್ಕೆ ಸಂಬಂಧಪಟ್ಟಂತೆ ಮಕ್ಕಳ ಕುರಿತು ಸಂಶೋಧನೆ ನಡೆಸುವಾಗ ಅನೇಕ ನೈತಿಕ ಪ್ರಶ್ನೆಗಳು ಹಾಗೂ ಸಂದಿಗ್ಧತೆಗಳು ಉದ್ಭವಿಸುತ್ತವೆ. ಈ ಪೈಕಿ ಕೆಲವು ಭಾಗವಹಿಸುವ ಮನುಷ್ಯರು ಅಥವಾ ದುರ್ಬಲ ಗುಂಪುಗಳೊಂದಿಗಿನ ಯಾವುದೇ ಸಂಶೋಧನೆಯನ್ನು ಹೋಲುತ್ತದೆ; ಆದರೆ ಇತರೆ ಸಂದಿಗ್ಧತೆಗಳು ನಿರ್ದಿಷ್ಟವಾಗಿ ಲೈಂಗಿಕ ಶೋಷಣೆಯಿಂದ ಪರಿಣಾಮ ಎದುರಿಸುತ್ತಿರುವಂತಹ ಮಕ್ಕಳಿಗೆ ಸಂಬಂಧಪಟ್ಟಿರುತ್ತವೆ (ಈ ವಿಷಯದ ಪುನರ್‌ಮನನಕ್ಕಾಗಿ 'ಮಕ್ಕಳನ್ನು ಒಳಗೊಂಡಂತಹ ಲೈಂಗಿಕ ಶೋಷಣೆಯ ಕುರಿತಾದ ಸಂಶೋಧನೆಯ ತತ್ವಗಳು' ಅನ್ನು ನೋಡಿರಿ). ಈ ಕೈಪಿಡಿಯು ಸಂಶೋಧನಾ ಕ್ಷೇತ್ರದಲ್ಲಿ (ಪ್ರಮುಖ ಸಂಶೋಧಕರಿಂದ ದತ್ತಾಂಶ ಸಂಗ್ರಹಗಾರರಿಂದ) ತೊಡಗಿರುವಂತಹ ಜನರಿಗೆ ಈ ನೈತಿಕ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಮಾರ್ಗದರ್ಶನವನ್ನು ಒದಗಿಸುತ್ತದೆ.

ಈ ಮಾರ್ಗಸೂಚಿಗಳು ಸರಳ ಹಾಗೂ ಪ್ರಯೋಗಿಕವಾಗಿವೆ.[1] ಸಂಶೋಧನೆಯು 'ಅನೈತಿಕ'ದಿಂದ ಹಿಡಿದು 'ಉತ್ತಮ ಅಭ್ಯಾಸ'ದವರೆಗೂ ನಿರಂತರವಾಗಿರಬಹುದು. ಈ ಮಾರ್ಗಸೂಚಿಗಳು ನಿಮಗೆ 'ಅತ್ಯುತ್ತಮ ಅಭ್ಯಾಸ'ದ ಅಂತ್ಯದ ಸಕಾರಾತ್ಮಕ ನಿರಂತರತೆಯನ್ನು ತಲುಪುವವರೆಗೆ ಸುಧಾರಣೆಗಳನ್ನು ಕೈಗೊಳ್ಳಲು ನೆರವಾಗುತ್ತದೆ.

ನೀವು ವಿನ್ಯಾಸಪಡಿಸುತ್ತಿರುವಂತೆ ಈ ಮಾರ್ಗಸೂಚಿಗಳು ನಿಮಗೆ ನಿಮ್ಮ ಸಂಶೋಧನಾ ಯೋಜನೆಯ ಕುರಿತು ಪ್ರತಿಬಿಂಬಿಸಲು ನೆರವಾಗುತ್ತವೆ. ಸಂಭಾವ್ಯ ಸಂಶೋಧನೆಯಲ್ಲಿ ಅರ್ಥಪೂರ್ಣ ಭಾಗವಹಿಸುವಿಕೆಗಾಗಿ ಮಕ್ಕಳ ಹಕ್ಕುಗಳು ಹಾಗೂ ಅವುಗಳ ಭಾಗವಹಿಸುವಿಕೆಯಿಂದ ಹಾನಿಗೊಳಗಾಗಬಹುದಾದಂತಹ ಸಂದರ್ಭಗಳನ್ನು ತಪ್ಪಿಸಲು ನಿಮ್ಮ ಜವಾಬ್ದಾರಿಯ ನಡುವೆ ಸಮತೋಲನವನ್ನು ಕಂಡುಕೊಳ್ಳಲು ಈ ಮಾರ್ಗಸೂಚಿಗಳು ನಿಮಗೆ ಮಾರ್ಗದರ್ಶನ ನೀಡುತ್ತವೆ. ಮಕ್ಕಳು ವಿವಿಧ ರೀತಿಗಳಲ್ಲಿ ಈ ಸಂಶೋಧನೆಯಲ್ಲಿ ಭಾಗವಹಿಸಬಹುದಾಗಿದೆ. ಉದಾಹರಣೆಗೆ, ಅವರು ಕೇವಲ ಭಾಗವಹಿಸುವವರಾಗಿರಬಹುದು, ಅಥವಾ ಸಹ–ಸಂಶೋಧಕರೂ ಆಗಬಹುದು. ಕೆಲವೊಮ್ಮೆ ನೀವು ಮಕ್ಕಳ ಯಾವುದೇ ನೇರವಾದ ಭಾಗವಹಿಸುವಿಕೆ ಇಲ್ಲದೆಯೇ ಲೈಂಗಿಕ ಶೋಷಣೆಯ ಕುರಿತಾದ ಸಂಶೋಧನೆಯನ್ನು ಕೈಗೊಳ್ಳಬಹುದು.

ಮಾರ್ಗಸೂಚಿಗಳ ಕ್ರಮ 1ನ್ನು ಪೂರ್ಣಗೊಳಿಸುವುದು ನಿಮ್ಮನ್ನು ಒಂದು ವೇಳೆ ಪ್ರಸ್ತಾಪಿತ ಸಂಶೋಧನೆ ಕೈಗೊಳ್ಳುವಂತೆ ಮುನ್ನಡೆಸಿದರೆ, ಕ್ರಮ 2 ನಿಮ್ಮನ್ನು ನಿಮ್ಮ ಸಂಶೋಧನಾ ಯೋಜನೆಯ ವಿನ್ಯಾಸ, ಅನುಷ್ಠಾನ ಹಾಗೂ ವಿಶ್ಲೇಷಣೆಯ ಹಂತಗಳ ಕುರಿತು ಆಲೋಚಿಸುವ ಏಳು ನೈತಿಕ ವಿಷಯಗಳನ್ನು ಒಳಗೊಂಡಿದೆ.

| | |
|---|---|
| ಕ್ರಮ 1: | *ನಿಮ್ಮ ಸಂಶೋಧನೆಯಲ್ಲಿ ಮಕ್ಕಳನ್ನೂ ಸೇರ್ಪಡೆ ಮಾಡಿಕೊಳ್ಳಬೇಕೆ?* |
| ಕ್ರಮ 2: | *ನೈತಿಕ ವಿಷಯಗಳು* |
| ಕ್ರಮ 3: | *ತೊಂದರೆಗಳು ಹಾಗೂ ಲಾಭಗಳ ವಿಶ್ಲೇಷಣೆ* |
| ಕ್ರಮ 4: | *ಮೂರನೆ ಪಾರ್ಟಿ ಪುನರ್‌ಮನನ* |

ಮಾರ್ಗಸೂಚಿಯ ಕ್ರಮ 3, ಈ ಏಳು ವಿಷಯಗಳಲ್ಲಿ ನೀವು ಪೂರ್ಣಗೊಳಿಸಿರುವಂತಹ ನೈತಿಕ ಚಟುವಟಿಕೆಗಳನ್ನು ಆಧರಿಸಿದ ನಿಮ್ಮ ಯೋಜನೆಯ ಸಂಭವನೀಯ ತೊಂದರೆಗಳು ಹಾಗೂ ಲಾಭಗಳ ವಿಶ್ಲೇಷಣೆಯಾಗಿದೆ. ಒಮ್ಮೆ ಇದನ್ನು ತುಂಬಿದ ನಂತರ, ನಿಮ್ಮ ಸಂಶೋಧನೆ ನೈತಿಕವಾಗಿದೆ ಎಂದು ಖಾತ್ರಿಪಡಿಸಿಕೊಳ್ಳಲು ಹಾಗೂ ನೀವು ಯೋಜನೆಯ ಪ್ರಗತಿಯೊಂದಿಗೆ ಮುನ್ನಡೆದಂತೆ ನಿಮ್ಮ ಸಂಶೋಧನಾ ಯೋಜನೆಯ ನೈತಿಕ ಅಂಶಗಳ ಮೇಲೆ ನಿಗಾ ವಹಿಸಲು ನಿಮಗೆ ನೆರವಾಗುವ ಸರಳವಾದ ಮಾರ್ಗದರ್ಶನವನ್ನು ಪಡೆದುಕೊಳ್ಳುವಿರಿ.

ಅಂತಿಮವಾಗಿ, ಕ್ರಮ 4 ಒಂದು ಮುಖ್ಯವಾದ ಕಾರ್ಯತತ್ಪರತೆ ಹೆಜ್ಜೆಯಾಗಿದ್ದು, ಮೂರನೆ ಪಾರ್ಟಿ ಪರಿಷ್ಕರಣೆ ಅಥವಾ ಪರಿಶೀಲನಾ ಪ್ರಕ್ರಿಯೆಯನ್ನು ಖಾತ್ರಿಪಡಿಸುತ್ತದೆ. ನಿಮ್ಮ ಸಂಶೋಧನಾ ಯೋಜನೆಯನ್ನು ಪೂರಕ ಬಾಹ್ಯ ತಜ್ಞರೊಂದಿಗೆ ಹಂಚಿಕೊಳ್ಳುವ ಮೂಲಕ ನೀವು ನಿಮ್ಮ ಗ್ರಹಿಕೆಯ ತೊಂದರೆಗಳು ಹಾಗೂ ನಿರೀಕ್ಷಿಸಿದಂತಹ ಲಾಭಗಳ ಅಂದಾಜಿಸುವಿಕೆಗೆ ಇತರರ ಒಪ್ಪಿಗೆಯನ್ನು ಖಾತ್ರಿಪಡಿಸಿಕೊಳ್ಳಬಹುದು ಹಾಗೂ ಬಹುಶಃ ಲಾಭಗಳು ವೃದ್ಧಿಯಾಗಲು ಹಾಗೂ ತೊಂದರೆಗಳು ಕಡಿಮೆಯಾಗಿಸುವ ನಿಮ್ಮ ಕಾರ್ಯತಂತ್ರಗಳು ಬಲಗೊಳ್ಳಬಹುದು.

ಈ ಮಾರ್ಗಸೂಚಿಗಳು ಒಮ್ಮೆ ಪೂರ್ಣಗೊಳಿಸಿ ಮರೆತುಹೋಗುವಂತಹ ಚೆಕ್‌ಲಿಸ್ಟ್ ಅಲ್ಲ, ನೀವು ಇದನ್ನು ನಿಮ್ಮ ಸಂಶೋಧನಾ ಯೋಜನೆಯ ಅವಧಿಯಲ್ಲಿ ನೀವು ಸರಿಯಾದ ದಾರಿಯಲ್ಲಿ ನಡೆಯುತ್ತಿರುವಿರಿ ಹಾಗೂ ನೀವು ಮಾಡಿದಂತಹ ನೈತಿಕ ನಿರ್ಧಾರಗಳ ಪ್ರಕಾರ ಮುನ್ನಡೆಯುತ್ತಿರುವಿರಿ ಎಂದು ಖಾತ್ರಿಪಡಿಸಿಕೊಳ್ಳಲು ಅನುಷ್ಠಾನ ಹಾಗೂ ವಿಶ್ಲೇಷಣಾ ಹಂತಗಳಲ್ಲಿ ಕ್ರಮಬದ್ಧವಾಗಿ ಓದುತ್ತಿರಬೇಕು.

---

1 ಈ ಮಾರ್ಗಸೂಚಿಗಳು ಶೈಕ್ಷಣಿಕ ಸಂಶೋಧನೆಗಳಲ್ಲಿ ನೈತಿಕ ಸಮಿತಿಗಳ ಯಾವುದೇ ರಾಷ್ಟ್ರೀಯ ನಿಬಂಧನೆಗಳಿಗೆ ಪರ್ಯಾಯವಲ್ಲ. ಆದರೆ ಲೈಂಗಿಕ ಶೋಷಣೆಯ ವಿಷಯಕ್ಕೆ ಸಂಬಂಧಪಟ್ಟಂತೆ ಸಂಶೋಧನೆಗೆ ಪ್ರಾಯೋಗಿಕ ಮಾರ್ಗದರ್ಶನವನ್ನು ಒದಗಿಸುತ್ತದೆ. ಅಲ್ಲದೆ ಇದು ಪ್ರಶ್ನೆಗಳಿಗೆ ನಿಗಧಿತ ಉತ್ತರಗಳನ್ನೂ ಒದಗಿಸುವುದಿಲ್ಲ, ಬದಲಿಗೆ ನಿಮ್ಮ ವಿಶೇಷ ಸಂಶೋಧನೆಗೆ ನೀವೇ ಸ್ವತಃ ಉತ್ತರಗಳನ್ನು ಕಂಡುಕೊಳ್ಳಲು ನೆರವಾಗುತ್ತವೆ.

# ಮಾರ್ಗದರ್ಶಕ ತತ್ವಗಳು

ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕುಗಳ ಒಡಂಬಡಿಕೆಯು (ಯುಎನ್‌ಸಿಆರ್‌ಸಿ), ನಾವು ಮಕ್ಕಳ ಹಕ್ಕುಗಳನ್ನು ಯಾವ ರೀತಿ ಗೌರವಿಸಬೇಕು ಎಂಬ ಕುರಿತು ಮಾರ್ಗದರ್ಶನ ನೀಡಲು ನಾಲ್ಕು ಮುಖ್ಯವಾದ ತತ್ವಗಳನ್ನು ಒಳಗೊಂಡಿದೆ. ಮಕ್ಕಳ ಮೇಲಿನ ಲೈಂಗಿಕ ಶೋಷಣೆಯನ್ನು ಒಳಗೊಂಡಂತಹ ಸಂಶೋಧನೆಯನ್ನು ಯಾವ ರೀತಿ ವಿನ್ಯಾಸ ಹಾಗೂ ಅನುಷ್ಠಾನಗೊಳಿಸಬಹುದು ಎಂದು ತಿಳಿದುಕೊಳ್ಳಲು ಇವುಗಳನ್ನು ಬಳಸಿಕೊಳ್ಳಬಹುದು.

### ತಾರತಮ್ಯರಹಿತ ನೀತಿ

ಮಕ್ಕಳ ವಿರುದ್ಧ ಯಾವುದೇ ರೀತಿಯ ತಾರತಮ್ಯತೆಯಿರಬಾರದು (ಯುಎನ್‌ಸಿಆರ್‌ಸಿ, ಕಲಂ 2). “ಪ್ರತಿ ಮಗುವಿಗೂ ಸಹ ಆತ ಅಥವಾ ಆಕೆಯ ಅನಿಸಿಕೆಗಳನ್ನು ವ್ಯಕ್ತಪಡಿಸುವ ಹಕ್ಕಿದೆ ಹಾಗೂ ಯಾವುದೇ ಜನಾಂಗ, ವರ್ಣ, ಲಿಂಗ, ಭಾಷೆ, ಧರ್ಮ, ರಾಜಕೀಯ ಅಥವಾ ಇತರೆ ಅಭಿಪ್ರಾಯ, ರಾಷ್ಟ್ರೀಯತೆ, ಜನಾಂಗೀಯ ಅಥವಾ ಸಾಮಾಜಿಕ ಮೂಲ, ಆಸ್ತಿ, ವಿಕಲಚೇತನತೆ, ಹುಟ್ಟು ಅಥವಾ ಇತರೆ ಸ್ಥಿತಿಗತಿಗಳಂಬ ತಾರತಮ್ಯತೆಯಿಲ್ಲದೆ ಅವರ ಅನಿಸಿಕೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.[2]

### ಮಗುವಿನ ಅತ್ಯುತ್ತಮ ಹಿತಾಸಕ್ತಿಗಳು

ಮಗುವಿನ ಜೀವನದ ಮೇಲೆ ಅತ್ಯಂತ ಹೆಚ್ಚಿನ ಸಕಾರಾತ್ಮಕ ಪರಿಣಾಮವನ್ನು ಬೀರುವಂತಹ ಅಂಶ ಪ್ರಾಥಮಿಕ ಆದ್ಯತೆಯಾಗಬೇಕು (ಯುಎನ್‌ಸಿಆರ್‌ಸಿ, ಕಲಂ 3).

### ಜೀವನ, ಬದುಕುಳಿಯುವಿಕೆ ಹಾಗೂ ಅಭಿವೃದ್ಧಿ

ರಾಜ್ಯ ಸರ್ಕಾರಗಳು ಮಕ್ಕಳ ಬದುಕುಳಿಯುವಿಕೆ ಹಾಗೂ ಆರೋಗ್ಯ ಅಭಿವೃದ್ಧಿಯನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಖಾತ್ರಿಪಡಿಸಬೇಕು (ಯುಎನ್‌ಸಿಆರ್‌ಸಿ, ಕಲಂ 6).

### ಭಾಗವಹಿಸುವಿಕೆ

ತನ್ನ ಸ್ವಂತ ಅನಿಸಿಕೆ/ಅಭಿಪ್ರಾಯವನ್ನು ಮಾಡಬಹುದಾದ ಪ್ರತಿ ಮಗುವಿಗೂ ಸಹ ತಮ್ಮ ಮೇಲೆ ಪರಿಣಾಮ ಬೀರಬಹುದಾದಂತಹ ಎಲ್ಲಾ ವಿಷಯಗಳಲ್ಲಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವ ಹಕ್ಕಿದೆ ಹಾಗೂ ಮಗುವಿನ ಅನಿಸಿಕೆ/ಅಭಿಪ್ರಾಯಗಳಿಗೆ ಅವರ ವಯಸ್ಸು ಹಾಗೂ ಮಗುವಿನ ಪ್ರೌಢಿಮೆಯ ಪ್ರಕಾರ ಪ್ರಾಮುಖ್ಯತೆಯನ್ನು ನೀಡಬೇಕು (ಯುಎನ್‌ಸಿಆರ್‌ಸಿ, ಕಲಂ 12).

ಮುಂದುವರೆದು, ಜನರನ್ನು ಒಳಗೊಂಡಂತಹ ಎಲ್ಲಾ ಸಂಶೋಧನೆಗಳಿಗೂ ಮಾರ್ಗದರ್ಶನ ನೀಡುವಂತಹ ಎರಡು ತತ್ವಗಳಿವೆ ಹಾಗೂ ಅವುಗಳು ಮಕ್ಕಳಿಗೂ ಅನ್ವಯಿಸುತ್ತವೆ:

## ತೊಂದರೆಯನ್ನು ಕನಿಷ್ಠಗೊಳಿಸಿ

ದೋಷರಹಿತ ತತ್ವಕ್ಕೆ (ಇತರೆ ಪದಗಳಲ್ಲಿ ‘ತೊಂದರೆ ಮಾಡದಿರಿ’) ಸಂಶೋಧಕರು, ಸೇರಿಸುವುದು ಅಥವಾ ಬಿಟ್ಟುಹೋಗಿರುವುದು ಎರಡೂ ಕ್ರಿಯೆಗಳನ್ವಯ ಕೈಗೊಳ್ಳುವ ಮೂಲಕ ಮಕ್ಕಳಿಗಾಗುವಂತಹ ಹಾನಿಯನ್ನು ತಪ್ಪಿಸಬೇಕು. ಒಂದು ವೇಳೆ ಮಹತ್ತರವಾದ ತೊಂದರೆ ಅಥವಾ ಹಾನಿ ಸಂಭವವಿದ್ದರೆ ಅದನ್ನು ಮುಂದುವರೆಸುವಂತಿಲ್ಲ. ಇಂತಹ ಕ್ಷೇತ್ರಗಳಲ್ಲಿನ ಸಂಶೋಧನೆಗಳಲ್ಲಿ ಶೂನ್ಯ ಹಾನಿ ಅಥವಾ ತೊಂದರೆಯನ್ನು ಖಾತ್ರಿಪಡಿಸುವುದು ಸಾಧ್ಯವಾಗುವುದಿಲ್ಲ. ಆದರೆ, ಸಂಭವನೀಯ ಹಾನಿ ಅಥವಾ ತೊಂದರೆಯನ್ನು ಮುಂಚಿತವಾಗಿಯೇ ಗ್ರಹಿಸಿ, ಸೂಕ್ತವಾದ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವ ಮೂಲಕ ಮಕ್ಕಳಿಗೆ ಹಾನಿಗಿಂತ ಹೆಚ್ಚು ಪ್ರಯೋಜನವಾಗುವಂತೆ ನೋಡಿಕೊಳ್ಳಬೇಕು. ಈ ತತ್ವವು ಮಕ್ಕಳ ಸ್ಥಿತಿಗತಿ, ಹಕ್ಕುಗಳು ಹಾಗೂ ಯೋಗಕ್ಷೇಮವನ್ನು ಸುಧಾರಿಸಲು ಸಂಶೋಧನೆಯನ್ನು ಕೈಗೊಳ್ಳುವ ಓರ್ವ ಸಂಶೋಧಕರ ಬಾಧ್ಯತೆಯನ್ನು ಉಲ್ಲೇಖಿಸುತ್ತದೆ.[3]

## ಗೌರವ

ಈ ತತ್ವವು, ಮಕ್ಕಳ ನಿರ್ಧಾರಗಳು ವಿಸ್ತಾರವಾದ ವೈಯಕ್ತಿಕ, ಸಂಬಂಧಿ, ಸಾಮಾಜಿಕ, ಸಾಂಸ್ಕೃತಿಕ, ಕಾನೂನಾತ್ಮಕ ಹಾಗೂ ಪಾರಿಸರಿಕ ಸಂದರ್ಭಗಳಲ್ಲಿ ಅಸ್ತಿತ್ವದಲ್ಲಿದೆ ಎಂಬುದನ್ನು ಗುರುತಿಸುವ ಅಗತ್ಯವಿದೆ. ಇದು, ಸಂಶೋಧನೆಗೆ ಸಮ್ಮತಿ ಸೂಚಿಸಬೇಕೋ ಅಥವಾ ಬೇಡವೋ ಎಂಬ ಕುರಿತಾದ ನಿರ್ಧಾರಗಳ ಕುರಿತು ಸಂಪೂರ್ಣವಾಗಿ ಮಾಹಿತಿ ನೀಡಿದ್ದಾಗ ಭಾಗವಹಿಸುವವರ ಘನತೆ ಹಾಗೂ ಅವರ ಸಾಮರ್ಥ್ಯವನ್ನು ಉಲ್ಲೇಖಿಸುತ್ತದೆ. ಮಕ್ಕಳಿಗೆ ಸಂಬಂಧಪಟ್ಟಂತೆ, ಭಾಗವಹಿಸಬೇಕೋ ಅಥವಾ ಬೇಡವೋ ಎನ್ನುವ ಕುರಿತಾದ ನಿರ್ಧಾರವು ಅಧಿಕಾರ ಕ್ರಿಯಾಶಕ್ತತೆಯಿಂದ ಹಾಗೂ ಅರಿವಿನ ಸಾಮರ್ಥ್ಯತೆಗಳು ಹಾಗೂ ಅಭಿವೃದ್ಧಿಯಿಂದ ರೂಪಿಸಲ್ಪಡುತ್ತದೆ.

2 Committee of the Rights of the Child, (2009). *General comment 12: The right of the child to be heard.* Parag 70.

3 Graham, A., Powell, M., Taylor, N., Anderson, D. & Fitzgerald, R. (2013). *Ethical Research Involving Children*. Florence: UNICEF Office of Research – Innocenti; UNICEF (2015) *Procedure for Ethical Standards in Research, Evaluation and Data Collection and Analysis*. Florence: UNICEF Innocenti Office of Research; Council for International Organizations of Medical Sciences (CIOMS) & World Health Organization (WHO). (2016). *International Ethical Guidelines for Biomedical Research Involving Humans*, Geneva: CIOMS.; United States. (1979). *The Belmont Report: Ethical Principles and Guidelines for the Protection of Human Subjects of Research*. Bethesda: The Commission, Academy of Social Sciences.

# ಕ್ರಮ 1: ನಿಮ್ಮ ಸಂಶೋಧನೆಯಲ್ಲಿ ಮಕ್ಕಳನ್ನು ಸೇರ್ಪಡೆ ಮಾಡಬೇಕೇ?

ಮಕ್ಕಳು ನೇರವಾಗಿ ನಿಮ್ಮ ಸಂಶೋಧನಾ ಯೋಜನೆಯಲ್ಲಿ ಭಾಗವಹಿಸಬೇಕೇ ಎಂಬ ವಿಷಯವನ್ನು ಅಂದಾಜಿಸುವುದು ಮೊದಲ ಹೆಜ್ಜೆ. ಮಕ್ಕಳ ಹಕ್ಕನ್ನು ಆಲಿಸುವಂತೆ ಮಾಡುವುದು ಹಾಗೂ ಹಾನಿ/ತೊಂದರೆಯ ಸಂಭವದೊಂದಿಗೆ, ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ಕ್ಷೇತ್ರದ ಜ್ಞಾನಕ್ಕೆ ಕೊಡುಗೆ ನೀಡುವ ಮುಖ್ಯವಾದ ಸಕಾರಾತ್ಮಕ ಮೌಲ್ಯವನ್ನು ಸಮತೋಲನ ಹೊಂದುವುದು ಅಗತ್ಯ.

## ಈ ಪ್ರಶ್ನೆಗಳಿಗೆ ಉತ್ತರಿಸಿ:

| | | ಹೌದು ✓ | ಇಲ್ಲ ✕ |
|---|---|---|---|
| A | ವಿಷಯ ಹಾಗೂ ಸಂದರ್ಭವನ್ನು ಪರಿಶೋಧಿಸಿದ ನಂತರ ನಿಮಗೆ ಈಗಾಗಲೇ ಅಸ್ತಿತ್ವದಲ್ಲಿರುವಂತಹ ಯಾವುದೇ ದತ್ತಾಂಶವು ಸಂಶೋಧನಾ ಪ್ರಶ್ನೆಗೆ ಉತ್ತರಿಸುವುದಿಲ್ಲ ಎಂಬುದು ಖಾತ್ರಿಯಾಗುತ್ತದೆ. | | |
| B | ಅಂದಾಜಿಸುವಿಕೆಯ ನಂತರ, ಮಕ್ಕಳನ್ನು ಒಳಪಡಿಸುವುದು/ಕೇಳುವುದಲ್ಲದೆ ದತ್ತಾಂಶವನ್ನು ಸಂಗ್ರಹಿಸುವ ಮತ್ಯಾವುದೇ ಮಾರ್ಗವಿಲ್ಲ ಎಂಬುದು ಖಾತ್ರಿಯಾಗುತ್ತದೆ (ಉದಾಹರಣೆಗೆ ಬಳಸಿದ ಲೆಕ್ಕಗಳು, ಕೇಸ್ ಫೈಲ್ ನೋಟ್‌ಗಳನ್ನು ಬಳಸುವುದು ಅಥವಾ 18 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಅನುಭವವುಳ್ಳ ಯುವಜನರನ್ನು ಸಂದರ್ಶಿಸುವುದು). | | |
| C | ಜಾಗರೂಕ ಅಂದಾಜಿಸುವಿಕೆಯ ನಂತರ, ಮಕ್ಕಳಿಗೆ ಜವಾಬ್ದಾರಿ ಅಥವಾ ಕೆಲಸದ ಹೆಚ್ಚಿನ ಹೊರೆಯಾಗುವುದಿಲ್ಲ ಎಂಬ ವಿಶ್ವಾಸ ನಿಮಗೆ ಬರುತ್ತದೆ (ಉದಾಹರಣೆಗೆ: ಶಾಲೆ ತಪ್ಪಿಸಿಕೊಳ್ಳುವುದು, ಸಂಪೂರ್ಣ ಹೆಚ್ಚುವರಿ ಕಾಗದದ ಕೆಲಸ). | | |
| D | ಜಾಗರೂಕ ಅಂದಾಜಿಸುವಿಕೆ ಹಾಗೂ ತಜ್ಞರೊಂದಿಗೆ ಸಮಾಲೋಚನೆಯ ನಂತರ, ಮಕ್ಕಳು ಭಾಗವಹಿಸಿದರೆ ಅವರಿಗೆ ಯಾವುದೇ ರೀತಿಯ ಶಾರೀರಿಕ ತೊಂದರೆಯ ಅಪಾಯವಾಗುವುದಿಲ್ಲ ಎಂಬ ವಿಶ್ವಾಸ ನಿಮಗೆ ಬರುತ್ತದೆ. | | |
| E | ವಿಷಯ ತಜ್ಞರು, ಬದುಕುಳಿದಿರುವವರೊಂದಿಗೆ ಸಮಾಲೋಚನೆ ಮಾಡಿದ ನಂತರ ಮಕ್ಕಳು ಯಾವುದೇ ರೀತಿಯ ಅಸಮರ್ಪಕವಾದ ಮಾನಸಿಕ ತೊಂದರೆಯನ್ನು ಅನುಭವಿಸುವುದಿಲ್ಲ ಎಂಬ ವಿಶ್ವಾಸ ನಿಮಗೆ ಬರುತ್ತದೆ | | |
| F | ಈ ಯೋಜನೆಯ ಭಾಗವಾಗಿ, ಭಾಗವಹಿಸುವವರಿಗೆ ನೇರವಾಗಿ ಸೂಕ್ತವಾದ ಆಘಾತ-ತಿಳಿವಳಿಕೆಯುಳ್ಳ ಹಾಗೂ ಮಕ್ಕಳ-ಸ್ನೇಹಿ ಬೆಂಬಲ ಸೇವೆಗಳಿವೆ. | | |

**!** ಈ ಮೇಲಿನ ಯಾವುದಾದರೂ ಪ್ರಶ್ನೆಗೆ ನೀವು 'ಇಲ್ಲ' ಎಂದು ಉತ್ತರಿಸಿದಲ್ಲಿ ಮಕ್ಕಳನ್ನು ಈ ಸಂಶೋಧನೆಯಲ್ಲಿ, ಹಾಲಿ ವಿನ್ಯಾಸದಲ್ಲಿ ಸೇರ್ಪಡೆ ಮಾಡಿಕೊಳ್ಳುವಂತಿಲ್ಲ. ಮರುಮೌಲ್ಯಮಾಪನಕ್ಕೆ ಮುಂಚೆ ಗುರುತಿಸಲ್ಪಡುವ ಸಮಸ್ಯೆಗಳನ್ನು ಸರಿಪಡಿಸಲು ವಿನ್ಯಾಸವನ್ನು ತಿದ್ದುಪಡಿ ಮಾಡಿ.

ಎಲ್ಲಾ ಪ್ರಶ್ನೆಗಳಿಗೂ 'ಹೌದು' ಎಂದು ಉತ್ತರ ಬಂದಲ್ಲಿ ಮುಂದಕ್ಕೆ ಹೋಗಿ **ಕ್ರಮ 2**

# ಕ್ರಮ 2: ನೈತಿಕ ವಿಷಯಗಳು

ಈ ಕೆಳಕಂಡ ಪುಟಗಳು, ನೀವು ಪೂರ್ಣಗೊಳಿಸಬೇಕಾಗಿರುವಂತಹ 'ನೈತಿಕ ಕಾರ್ಯಗಳ' ಸರಣಿಯ ಜೊತೆಗೆ ಸಂಕ್ಷಿಪ್ತವಾದ ವಿವರಣೆ ಒಳಗೊಂಡಂತೆ ಏಳು ನೈತಿಕ ವಿಷಯಗಳನ್ನು ಒಳಗೊಂಡಿದೆ. ಈ ಏಳೂ ವಿಷಯಗಳನ್ನು ಓದಿ, ಕಾರ್ಯಗಳನ್ನು ಪೂರ್ಣಗೊಳಿಸಿ. ಅಗತ್ಯವಿರುವ ಕಡೆ, ಕಾರ್ಯಗಳಿಗೆ ಪ್ರತಿಕ್ರಿಯೆ ನೀಡಲು ಅಗತ್ಯದ ಪ್ರಕಾರ ನಿಮ್ಮ ಸಂಶೋಧನಾ ವಿನ್ಯಾಸವನ್ನು ಪರಿಷ್ಕರಿಸಿಕೊಳ್ಳಿ.

## 1. ಅರ್ಥಪೂರ್ಣ ಮಕ್ಕಳ ಭಾಗವಹಿಸುವಿಕೆ

ಲೈಂಗಿಕ ಶೋಷಣೆಗೆ ಸಂಬಂಧಪಟ್ಟ ಸಂಶೋಧನೆಯಲ್ಲಿ ಮಕ್ಕಳ ಭಾಗವಹಿಸುವಿಕೆ, ಅವರ ಹಾಗೂ ಇತರರ ರಕ್ಷಣೆಯಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸಬಲ್ಲದು. ಮಕ್ಕಳ ಮನೋಭಾವಗಳು ಹಾಗೂ ಅನುಭವಗಳ ಕುರಿತಾದ ಪ್ರಶ್ನೆಗಳನ್ನು ಕೇಳುವುದು ಹಾಗೂ ತಾವು ಜೀವಿಸುವ ಸನ್ನಿವೇಶಗಳು ಹಾಗೂ ಸಾಂಸ್ಕೃತಿಕ ಚೌಕಟ್ಟಿನೊಳಗೆ ಸಾಮಾಜಿಕವಾಗಿ ಕಳಂಕ ಎನ್ನುವಂತಹ ಸೂಕ್ಷ್ಮ ವಿಷಯಗಳ ಕುರಿತು ಆಸಕ್ತ ವಯಸ್ಕರೊಂದಿಗೆ ಭಾಗವಹಿಸುವುದು ಇಂತಹ ಪ್ರಶ್ನೆಗಳನ್ನು ತಮ್ಮ ಅತ್ಯುತ್ತಮ ಹಿತಾಸಕ್ತಿಗಾಗಿ ಕೇಳಲಾಗುತ್ತಿದೆ ಎಂದು ಮಕ್ಕಳು ಪರಿಗಣಿಸುತ್ತಾರೆ.

ಈ ಸಂದರ್ಭಗಳಲ್ಲಿ ಮಕ್ಕಳ ಭಾಗವಹಿಸುವಿಕೆ ಒಳಗೊಂಡಿರುವ ಸಂಶೋಧನೆಯು, ಮಕ್ಕಳ ಧ್ವನಿಗಳನ್ನು ಕೇಳುವಂತೆ ಮಾಡಲು ಒಂದು ದಾರಿಯನ್ನು ಒದಗಿಸುವುದು ಹಾಗೂ ನಿಂದಿಸುವವರು ಯಾವುದೇ ಶಿಕ್ಷೆಯಿಲ್ಲದೆ ಎಗ್ಗಿಲ್ಲದೆ ತಮ್ಮ ಕೆಲಸವನ್ನು ಮುಂದುವರೆಸಲು ದಾರಿಯಾಗುವಂತಹ ಜನರ ಮೂಕ ಸಂಸ್ಕೃತಿಗೆ ಸವಾಲನ್ನು ಒದಗಿಸುವುದು – ಮಕ್ಕಳು ಯಾವುದೇ ತೊಂದರೆಯನ್ನು ಅನುಭವಿಸದಿರುವಂತೆ, ಹಾನಿಯಾಗದಂತೆ ನೋಡಿಕೊಳ್ಳಿ.

# ನೈತಿಕ ಕಾರ್ಯಗಳು

**1.1**

ಸಂಶೋಧನೆಯ ವಿಷಯಕ್ಕೆ ಸಂಬಂಧಪಟ್ಟಂತೆ ಮಗುವಿಗೆ ಸೂಕ್ತ ಹಾಗೂ ವಯಸ್ಸಿಗೆ ಅನುಗುಣವಾದಂತಹ ಮಾಹಿತಿ ದೊರೆಯುವುದನ್ನು ಖಾತ್ರಿಪಡಿಸುವುದು, ಸಂಶೋಧನೆಯಲ್ಲಿ ಭಾಗವಹಿಸಲು ತಿಳಿವಳಿಕೆಯುಳ್ಳ ನಿರ್ಧಾರ ಕೈಗೊಳ್ಳುವ ಸಲುವಾಗಿ ಮಗುವಿನ ಪಾತ್ರ ಹಾಗೂ ನಿರೀಕ್ಷೆಗಳು ಹಾಗೂ ಮಗುವಿನ ಸಂಶೋಧನೆಯ ಸಂಭವನೀಯ ಪರಿಣಾಮಗಳ ಕುರಿತು ಮಗುವಿಗೆ ಖಾತ್ರಿಪಡಿಸುವುದು. ಮಾಹಿತಿಯನ್ನು ನಿರ್ದಿಷ್ಟವಾದ ಮಗುವಿನ ಅಗತ್ಯಗಳಿಗೆ ತಕ್ಕಂತೆ ಸರಿಹೊಂದಿಸಿರುವುದನ್ನು ಖಾತ್ರಿಪಡಿಸುವುದು (ಉದಾಹರಣೆಗೆ: ಅನಕ್ಷರಸ್ಥ ಮಕ್ಕಳು, ಕಿವುಡು ಮಗು, ಒಂದು ನಾಲ್ಕು ವರ್ಷ ವಯಸ್ಸಿನ ಮಗುವಿನ ವಿರುದ್ಧ ಹದಿನಾರು ವರ್ಷ ವಯಸ್ಸಿನ ಮಗು, ಇತ್ಯಾದಿ)

**1.2**

ಯೋಜನೆಯ ವಿನ್ಯಾಸದ ಮೇಲೆ ಪ್ರಭಾವ ಬೀರಬಹುದಾದ ಅಥವಾ ಯೋಜನೆಯೇ ಸಂಘರ್ಷವನ್ನು ಎದುರಿಸಬಹುದಾದಂತಹ ನಿಯಮಗಳು ಹಾಗೂ ನಿರೀಕ್ಷೆಗಳಿಗಾಗಿ ಮಗುವಿನ ಸಾಂಸ್ಕೃತಿಕ ಸನ್ನಿವೇಶವನ್ನು ಪರಿಗಣಿಸಲಾಗಿದೆ (ಉದಾಹರಣೆಗೆ: ಸಂಪ್ರದಾಯಗಳ ಪ್ರಕಾರ ಬಹಿಷ್ಕರಿಸಲ್ಪಟ್ಟಿರುವ ಅಥವಾ ಸಂಘರ್ಷದಲ್ಲಿರುವಂತಹ ಸಂಶೋಧನಾ ಕಲ್ಪನೆಗಳು). ಈ ಅಪಾಯವನ್ನು ಒಪ್ಪಿಕೊಂಡಲ್ಲಿ, ಅದನ್ನು ಭಾಗವಹಿಸುವವರಿಗೆ ವಿವರಿಸಬೇಕು.

**1.3**

1.3 ಸಂಶೋಧನೆಯಲ್ಲಿ ಭಾಗವಹಿಸಲು ಮಾಹತಿಪೂರ್ವ ನಿರ್ಧಾರವನ್ನು ತೆಗೆದುಕೊಳ್ಳುವ ಸಲುವಾಗಿ, ಮಗುವಿನ ಪೋಷಕ ಅಥವಾ ಪಾಲಕರಿಗೆ ಸಂಶೋಧನೆಯ ವಿಷಯವಸ್ತು, ಸಂಶೋಧನೆಯಿಂದ ಪಡೆಯುವ ಫಲಿತಾಂಶಗಳನ್ನು ಯಾವ ರೀತಿ ಬಳಸಲಾಗುತ್ತದೆ, ಮಗುವಿನ ಪಾತ್ರ ಹಾಗೂ ನಿರೀಕ್ಷೆಗಳು ಹಾಗೂ ಮಗುವಿಗಾಗಿ ಸಂಶೋಧನೆಯ ಸಂಭವನೀಯ ಪರಿಣಾಮಗಳು ಕುರಿತ ಮಾಹಿತಿ ದೊರೆಯುವುದನ್ನು ಖಾತ್ರಿಪಡಿಸಿ.

**1.4**

ಮಕ್ಕಳು ಭಾಗವಹಿಸುವ ರೀತಿಯನ್ನು ಪರಿಗಣಿಸಿ. ಉದಾಹರಣೆಗೆ, ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡುವವರಾಗಿ, ಅಥವಾ ನಿಮ್ಮ ಸಂಶೋಧನೆಯೊಳಗೆ ಮಕ್ಕಳು ಸಂಶೋಧನೆಯ ವಿನ್ಯಾಸದೊಳಗೆ ಆಳವಾಗಿ, ಅಥವಾ ಸಂಶೋಧನೆಯನ್ನು ನಡೆಸಲು ಅವರನ್ನು ಸೇರ್ಪಡೆ ಮಾಡಿಕೊಳ್ಳುವುದು ಸುರಕ್ಷಿತವೇ ಹಾಗೂ ಸೂಕ್ತವೇ ಎನ್ನುವುದನ್ನು ಖಾತ್ರಿಪಡಿಸಿ. (ಉದಾಹರಣೆಗೆ ಬಾಲ್ಯದಲ್ಲಿ ನಿಂದನೆಗೆ ಒಳಗಾದ ಅನುಭವವಿರುವವರು, ಹಾಗೂ ಬಲಿಷ್ಠವಾದ ಬೆಂಬಲ ಸಂಪರ್ಕಜಾಲಗಳಿರುವವರು ಉತ್ತಮ ದತ್ತಾಂಶ ಸಂಗ್ರಹಗಾರರಾಗಬಹುದು).

ಮಕ್ಕಳನ್ನು ಒಳಗೊಳ್ಳಲು ವಿಭಿನ್ನ ಮಾರ್ಗಗಳಿವೆ: ಅವರು ಸಂಶೋಧಕರು ಕೇಳಿದ ಪ್ರಶ್ನೆಗಳಿಗೆ ಕೇವಲ ಪ್ರತಿಕ್ರಿಯಿಸುವವರಾಗಿರಬಹುದು, ಅಥವಾ ಅವರು ಸಂಶೋಧನಾ ವಿನ್ಯಾಸದ ಮೇಲೆ ಪ್ರಭಾವ ಬೀರುವ ಸಹ–ಸಂಶೋಧಕರಾಗಿರಬಹುದು ಮತ್ತು ದತ್ತಾಂಶ ಸಂಗ್ರಹಣೆ ಅಥವಾ ವಿಶ್ಲೇಷಣೆಯಲ್ಲಿ ಭಾಗವಹಿಸಬಹುದು. ಮಕ್ಕಳ ಹಕ್ಕುಗಳ ಸಮಿತಿಯು ಮಕ್ಕಳ ಅರ್ಥಪೂರ್ಣ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಐದು ಪ್ರಾಯೋಗಿಕ ಅಂಶಗಳನ್ನು ಶಿಫಾರಸು ಮಾಡುತ್ತದೆ: ಸಾಕಷ್ಟು ಮಾಹಿತಿಯನ್ನು ಒದಗಿಸುವುದು; ಭಾಗವಹಿಸಲು ಅವಕಾಶ ನೀಡಿ; ಮಗುವನ್ನು ಗಂಭೀರವಾಗಿ ಪರಿಗಣಿಸಿ, ಫಲಿತಾಂಶಗಳ ಬಗ್ಗೆ ಮಗುವಿಗೆ ತಿಳಿಸಿ; ಮಗುವು ತಮ್ಮ ಅಭಿಪ್ರಾಯವನ್ನು ಸರಿಯಾಗಿ ಪ್ರತಿನಿಧಿಸುವುದಿಲ್ಲ ಎಂದು ಭಾವಿಸಿದಾಗ ಪ್ರತಿಕ್ರಿಯಿಸಲು ಮತ್ತು ದೂರು ನೀಡುವ ಸಾಧ್ಯತೆಯನ್ನು ನೀಡಿ.[4]

ಈ ವಿಷಯದಲ್ಲಿನ ನೈತಿಕ ಕಾರ್ಯಗಳು 'ಉತ್ತಮ ಹಿತಾಸಕ್ತಿಗಳು', 'ಭಾಗವಹಿಸುವಿಕೆ' ಮತ್ತು 'ಹಾನಿಯನ್ನು ಕಡಿಮೆ ಮಾಡುವುದು' ಎಂಬ ಮಾರ್ಗದರ್ಶಿ ಸೂತ್ರಗಳ ನಡುವೆ ಸಮತೋಲನವನ್ನು ಕಂಡುಹಿಡಿಯುವುದನ್ನು ಒಳಗೊಂಡಿರುತ್ತದೆ. ಭಾಗವಹಿಸುವ ಹಕ್ಕಿನಿಂದ ಸಮತೋಲನಗೊಂಡರೆ ಕೆಲವು ಹಾನಿಗಳನ್ನು ಸ್ವೀಕರಿಸಬಹುದು. ಆದಾಗ್ಯೂ, ಸಂಶೋಧಕರು ಮಕ್ಕಳು ಮತ್ತು ಅವರ ಪಾಲನೆ ಮಾಡುವವರಿಗೆ ಆ ನಿರ್ಧಾರವನ್ನು ತೆಗೆದುಕೊಳ್ಳುವ ಎಲ್ಲಾ ಮಾಹಿತಿಯನ್ನು ಒದಗಿಸಬೇಕು.

**1.5**

ಭಾಗವಹಿಸುವ (ಅಂದರೆ ಪರಿಸರ, ಸ್ಥಳ, ಭಾಗವಹಿಸಲು ಕೋರುವ ಆಹ್ವಾನ, ಸಮಯ ಹಾಗೂ ಗಂಟೆ) ಸನ್ನಿವೇಶಗಳು ದೊರೆಯುವಂತಿರುವುದು ಹಾಗೂ ಮಗುವಿಗೆ ಸೂಕ್ತವಾಗಿರುವುದನ್ನು ಖಾತ್ರಿಪಡಿಸಿ.

**1.6**

ಮಗುವನ್ನು ಗಂಭೀರವಾಗಿ ಪರಿಗಣಿಸುವುದನ್ನು ಖಾತ್ರಿಪಡಿಸಿ. ಮಕ್ಕಳಿಂದ ಅವರು ಯಾವ ರೀತಿ ಭಾಗವಹಿಸಲು ಬಯಸುವರು ಹಾಗೂ ವಿನ್ಯಾಸದ ಸಮಯದಲ್ಲಿ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಎನ್ನುವ ವಿಚಾರಗಳ ಕುರಿತು ಮಕ್ಕಳಿಂದ ಹಿಮ್ಮಾಹಿತಿಯನ್ನು ಪಡೆಯುವುದು ಇದರಲ್ಲಿ ಒಳಗೊಂಡಿರಬೇಕು. ಸಾಧ್ಯವಾದಲ್ಲಿ/ಅಪೇಕ್ಷಿತವಾಗಿ, ಮಕ್ಕಳಿಂದ ಸಂಶೋಧನೆಯ ವಿನ್ಯಾಸದ ಕುರಿತು ಮಾಹಿತಿಯನ್ನು ಪಡೆಯಿರಿ ಅಥವಾ ಮಕ್ಕಳೊಂದಿಗೆ ಅದನ್ನು ಸೃಷ್ಟಿಸಿ.

**1.7**

ಸಂಶೋಧನೆಯ ಪರಿಣಾಮಗಳ ಕುರಿತು ಮಗುವಿಗೆ ಮಾಹಿತಿ ಇರುವುದನ್ನು ಖಾತ್ರಿಪಡಿಸಿಕೊಳ್ಳಿ.

**1.8**

ಲೈಂಗಿಕ ಶೋಷಣೆಯ ಸಂದರ್ಭದಲ್ಲಿ ಮಕ್ಕಳ ಸೂಕ್ತ ಶಾರೀರಿಕ ಹಾಗೂ ಮಾನಸಿಕ ರಕ್ಷಣೆಯನ್ನು ಖಾತ್ರಿಪಡಿಸಿ (ಕೆಳಗಿನ ವಿಭಾಗಗಳನ್ನು ನೋಡಿ).



4 Committee of the Rights of the Child, (2009). *General comment 12: The right of the child to be heard*. Parag 21 and Lansdown G.I., (2005). *The evolving capacities of the child*. Innocenti Research Centre, UNICEF/Save the Children, Florence.

## 2. ಪರಿಗಣಿಸಬೇಕಾದ ವಿಧಾನಗಳು

ಲೈಂಗಿಕ ಶೋಷಣೆಯ ಸಂದರ್ಭಕ್ಕೆ ನಿರ್ದಿಷ್ಟವಾದ ಸಂಶೋಧನೆಗಾಗಿ ಮಕ್ಕಳೊಂದಿಗೆ ಸಂವಹನ ನಡೆಸಲು ನೀವು ಬಳಸುವ ವಿಧಾನಗಳನ್ನು ವಿನ್ಯಾಸಗೊಳಿಸಲು ಮತ್ತು ನಡೆಸಲು ನೀವು ಪರಿಗಣಿಸಬೇಕಾದ ನೈತಿಕ ಕಾರ್ಯಗಳ ಮೇಲೆ ಈ ವಿಭಾಗವು ಗಮನ ಹರಿಸುತ್ತದೆ.

# ನೈತಿಕ ಕಾರ್ಯಗಳು

**2.1**

ನೀವು ದತ್ತಾಂಶ ಸಂಗ್ರಹಕ್ಕಾಗಿ ಬಳಸುವ ಭಾಷೆಯು ಸೇರ್ಪಡೆಗೊಂಡಿರುವಂತೆ, ನಿರ್ಣಯಿಸದ ಹಾಗಿರಬೇಕು ಹಾಗೂ ನಿಮ್ಮ ಗುರಿ ಜನಸಂಖ್ಯೆ ವಿವರಿಸುವಂತಹ ವಿಷಯಗಳಿಗೆ ತಕ್ಕಂತೆ ಇರಬೇಕು (ವಯಸ್ಸು, ಲಿಂಗ, ಸಂಸ್ಕೃತಿ).

**2.2**

ನೀವು ಬಳಸುವಂತಹ ಭಾಷೆ ಮಕ್ಕಳಿಗೆ ಅವರು ಸಂತ್ರಸ್ತರು ಎಂಬ ಭಾವನೆಯನ್ನು ಉಂಟು ಮಾಡದೇ ಇರುವಂತಿರಬೇಕು, ಅವರು ಕೆಟ್ಟದಾಗಿ ವರ್ತಿಸಿದರು ಅಥವಾ ಅವರನ್ನು ದೂರವಿಡಬಹುದು ಎಂಬ ಭಾವನೆ ಬಾರದಿರುವಂತೆ ಇರಬೇಕು.

**2.3**

ಸಂಶೋಧನಾ ತಂಡವು ಅಗತ್ಯ ತಜ್ಞತೆ ಹೊಂದಿರಬೇಕು (ಉದಾಹರಣೆಗೆ: ಮಕ್ಕಳ ಅಭಿವೃದ್ಧಿ, ಲೈಂಗಿಕ ಶೋಷಣೆ ಹಾಗೂ ಆಘಾತ–ಮಾಹಿತಿ ಅಭ್ಯಾಸ ಸೂಕ್ಷ್ಮತೆ, ಮಕ್ಕಳೊಂದಿಗೆ ಸಂವಹನಾತ್ಮಕ, ಸಂದರ್ಭದಲ್ಲಿ ಕಾನೂನು ಅವಕಾಶಗಳು).

**2.4**

ನೀವು ಭಾಗವಹಿಸುವವರು ಹಾಗೂ ದತ್ತಾಂಶ ಸಂಗ್ರಹಗಾರರ ಲಿಂಗವನ್ನು ಪರಿಗಣಿಸಿರಬೇಕು

**2.5**

ದತ್ತಾಂಶ ಸಂಗ್ರಹಕ್ಕಾಗಿ ಎಚ್ಚರಿಕೆಯ ವಿಧಾನಗಳು ಹಾಗೂ ಪರಿಸರಗಳ ಮೂಲಕ ಭಾಗವಹಿಸುವವರ ಮೇಲೆ ಶಕ್ತಿಯ ಸಂಬಂಧಗಳ (ಉದಾಹರಣೆಗೆ: ಸಾಮಾಜಿಕ ಆರ್ಥಿಕ ಹಿನ್ನೆಲೆ, ಜನಾಂಗೀಯತೆ) ಪ್ರಭಾವ ಕಡಿಮೆಯಾಗುವುದಕ್ಕೆ ನೀವು ದಾರಿಗಳನ್ನು ಕಂಡುಕೊಂಡಿರಬೇಕು (ಮಕ್ಕಳ–ಸ್ನೇಹಿ, ಮಗು–ನಿಯಂತ್ರಿತ ಪರಿಸರ).

**2.6**

ಮಾನಸಿಕ ಆಘಾತ ಅಥವಾ ಬಹಿರಂಗಪಡಿಸಿದ ಸಂದರ್ಭಗಳಲ್ಲಿ ಭಾಗವಹಿಸುವವರನ್ನು ಬೆಂಬಲಿಸಲು ನೀವು ಆಘಾತ ಹಾಗೂ ಶೋಷಣೆಯ (ಅಗತ್ಯವಿದ್ದಲ್ಲಿ ಸಂಶೋಧನಾ ತಂಡದ ಹೊರಗಿನಿಂದ) ವಿಷಯಗಳಲ್ಲಿ ತರಬೇತಿ ಹೊಂದಿರುವ ಮನಃಶಾಸ್ತ್ರಜ್ಞ ಅಥವಾ ಸಂಬಂಧಪಟ್ಟ ವ್ಯಕ್ತಿಯಿಂದ ಬೆಂಬಲವನ್ನು ಪಡೆದುಕೊಳ್ಳಿ.

**2.7**

ನೀವು ದತ್ತಾಂಶ ಸಂಗ್ರಹಿಸುವವರಿಗೆ ಮಕ್ಕಳ ವಯೋನಿರ್ದಿಷ್ಟ ಆಂಗಿಕ ಭಾಷೆಯನ್ನು (ಬಾಡಿ ಲ್ಯಾಂಗ್ವೇಜ್) ತಿಳಿದುಕೊಳ್ಳುವುದು, ಮೌಖಿಕ ಸೂಚನೆಗಳು ಹಾಗೂ ನಿಮ್ಮ ವಿಧಾನದಿಂದಾಗಿ ಸಂಭವಿಸಬಹುದಾದ ತೊಂದರೆಗಳ ಕುರಿತು ತರಬೇತಿ ಒದಗಿಸಬೇಕು.

**2.8**

ಬದುಕುಳಿದಿರಬಹುದಾದ ಮಕ್ಕಳನ್ನು ಒಳಪಡಿಸಲು, ಸಂಭವನೀಯ ತಾರತಮ್ಯತೆಗಳು ಅಥವಾ ಅಸಮರ್ಪಕ ಭಾಷೆ ಹಾಗೂ ತಂತ್ರಗಳನ್ನು ಗುರುತಿಸುವ ಸಲುವಾಗಿ ನೀವು ತರಬೇತಿ ಹಾಗೂ ಅವರನ್ನು ರೋಲ್‌ಪ್ಲೇಗಳ ಮೂಲಕ ಗಮನಿಸುವ ಮೂಲಕ ದತ್ತಾಂಶ ಸಂಗ್ರಹಿಸುವವರನ್ನು ಮೌಲ್ಯಮಾಪನ ಮಾಡಿರಬೇಕು.

**2.9**

ದತ್ತಾಂಶ ಸಂಗ್ರಹಿಸುವವರನ್ನು ಗುರುತಿಸುವಲ್ಲಿ ನೀವು ನಿಮ್ಮ ಮಗುವಿನ ಸುರಕ್ಷತಾ ನೀತಿಯನ್ನು ಅನುಸರಿಸುವಿರಿ.

ಸಂಶೋಧನಾ ವಿಧಾನದಿಂದಲೇ ಹಲವಾರು ಸಂಭಾವ್ಯ ಹಾನಿಗಳಿವೆ. ನಿಮ್ಮ ಸಂಶೋಧನಾ ಯೋಜನೆಯ ವಿನ್ಯಾಸದ ಸಮಯದಲ್ಲಿ ಇವುಗಳನ್ನು ಮೌಲ್ಯಮಾಪನ ಮಾಡಬೇಕು ಮತ್ತು ಯೋಜಿಸಬೇಕು. ತೀರ್ಪಿನ ಅಥವಾ ಆಕ್ರಮಣಕಾರಿ ಪದಗಳನ್ನು ಬಳಸುವುದು ಸಹ ಸಮಸ್ಯೆ ಆಗಬಹುದು; ಡೇಟಾ ಸಂಗ್ರಹಕಾರರು ಮತ್ತು ಭಾಗವಹಿಸುವವರ ನಡುವಿನ ವಿಭಿನ್ನ ಲಿಂಗ ಅಥವಾ ದೊಡ್ಡ ವಯಸ್ಸಿನ ವ್ಯತ್ಯಾಸಗಳು ಮಕ್ಕಳನ್ನು ಮಾತನಾಡಲು ಅನಾನುಕೂಲಗೊಳಿಸುತ್ತದೆ; ಕೆಲವು ಮಕ್ಕಳ ಗುಂಪುಗಳೆಡೆಗೆ ಪೂರ್ವಾಗ್ರಹ ಅಥವಾ ಊಹಾಪೋಹ ಭಾವ ಹೊಂದಿರುವುದು; ವಯಸ್ಕರ ಮತ್ತು ಮಕ್ಕಳ ನಡುವೆ ಅಧಿಕಾರಯುತ ಸಂಬಂಧದಿಂದ ನಿಂದನೆಗೊಳಗಾಗಬಹುದು; ಅಥವಾ ಸಂಶೋಧನಾ ತಂಡವು ಎದ್ದಿರುವ ಸಮಸ್ಯೆಗಳನ್ನು 'ಸರಿಪಡಿಸುತ್ತದೆ' ಎಂಬ ನಿರೀಕ್ಷೆಗಳನ್ನು ಸ್ಥಾಪಿಸುವುದು.

2.10

ದತ್ತಾಂಶ ಸಂಗ್ರಹಿಸುವ ವಿಧಾನವು (ವ್ಯಕ್ತಿ ಅಥವಾ ಗುಂಪು) ಮಕ್ಕಳನ್ನು ಸುಲಭ ಸ್ಥಾನದಲ್ಲಿರಿಸುತ್ತದೆ ಹಾಗೂ ಅವರಲ್ಲಿ ಯಾವುದೇ ರೀತಿಯ ತಾರತಮ್ಯತೆಗಳು ಅಥವಾ ಒತ್ತಡಗಳನ್ನು ಸೃಷ್ಟಿಸುವುದಿಲ್ಲ.

2.11

ಭಾಗವಹಿಸುವ ಮಗು/ಮಕ್ಕಳೊಂದಿಗೆ ಸಂಶೋಧನೆ ನಡೆಸಲು ಸೂಕ್ತವಾದ ಸ್ಥಳವನ್ನು ಗುರುತಿಸಿ ಒಪ್ಪಿಗೆ ಪಡೆದುಕೊಳ್ಳಿ.

2.12

ಕೊಠಡಿಯೊಳಗೆ ಯಾರಿರುತ್ತಾರೆ ಎಂದು ನಿರ್ಧರಿಸಿ. ಖಾಸಗಿಯಾಗಿದ್ದಾಗ, ಸ್ಥಳವು ಸುರಕ್ಷತಾ ನೀತಿಯ ಅಗತ್ಯಗಳನ್ನು ಪೂರೈಸುವಂತಿರಬೇಕು (ಇತರರಿಗೆ ಗೋಚರಿಸಬೇಕು, ಮಕ್ಕಳೊಂದಿಗೆ ಕೇವಲ ವಯಸ್ಕರು ಮಾತ್ರ ಇರುವಂತಿಲ್ಲ). ಮಗುವಿನೊಂದಿಗೆ ವಯಸ್ಕರಾಗಿ ಕೇವಲ ನೀವೊಬ್ಬರೇ ಇರಬೇಡಿ ಹಾಗೂ ಕೊಠಡಿಯು ತೆರೆದಿರುವುದು ಹಾಗೂ ಇತರರ ಕಣ್ಣಿಗೆ ಕಾಣುವಂತಿರುವುದನ್ನು ಖಾತ್ರಿಪಡಿಸಿ.

2.13

ಭಾಗವಹಿಸುವ ಮಕ್ಕಳ ಸಂಭವನೀಯ ಪ್ರಯಾಣ ಭತ್ಯೆಗೆ ಸಂಬಂಧಪಟ್ಟಂತೆ ಖರ್ಚು ವೆಚ್ಚಗಳು ಹಾಗೂ ವ್ಯವಸ್ಥೆಯನ್ನು ಮಾಡಿ.

2.14

ಡೇಟಾವನ್ನು ಸಂಗ್ರಹಿಸುವ ವಿಧಾನವು ಪಾಲ್ಗೊಳ್ಳುವವರ ಆದ್ಯತೆಗಳಿಗೆ ತಕ್ಕಂತೆ ಹೊಂದಿಕೊಳ್ಳುವಂತಿರಲಿ ಮತ್ತು ಭಾಗವಹಿಸುವವರ ವಯಸ್ಸು ಮತ್ತು ಸಾಮರ್ಥ್ಯಕ್ಕೆ ಸೂಕ್ತವಾಗಿರಲಿ.

2.15

ಮಗುವಿನ ಮೇಲಿನ ನಿಂದನೆಯ ವಿಷಯದ ಕುರಿತು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ದೂರನ್ನು ನೀಡುವ ಕಟ್ಟುಪಾಡುಗಳಿಗೆ ಸಂಬಂಧಪಟ್ಟ ಕಾನೂನುಗಳು ಹಾಗೂ ನಿಬಂಧನೆಗಳನ್ನು, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಪರಿಗಣಿಸಿ. ನಿಮ್ಮ ಸಂಶೋಧನೆಗೆ ವರದಿ ಸಲ್ಲಿಸುವುದು ಕಡ್ಡಾಯವಾಗಿದ್ದರೆ ನೀವು ಭಾಗವಹಿಸುವವರಿಗೆ ಆ ವಿಷಯದ ಕುರಿತು ಅವರ ಅನುಮತಿ ಪಡೆಯುವುದಕ್ಕೆ ಮುಂಚಿತವಾಗಿಯೇ ತಿಳಿಸಬೇಕು ಹಾಗೂ ವರದಿಗಳನ್ನು ಯಾವ ರೀತಿ ತಯಾರಿಸಲಾಗುತ್ತದೆ ಮತ್ತು ಹೇಗೆ ಮಗು ಈ ಪ್ರಕ್ರಿಯೆಗಳಲ್ಲಿ ಭಾಗವಹಿಸುತ್ತದೆ ಅಥವಾ ಭಾಗವಹಿಸುವುದಿಲ್ಲ ಎಂಬ ವಿಷಯಗಳನ್ನು ತಿಳಿಸಿ. ಜೊತೆಗೆ ವರದಿ ಮಾಡುವುದು ಮಗುವಿನ ಸುರಕ್ಷತೆಯ ಮೇಲೆ ಯಾವ ರೀತಿ ಪರಿಣಾಮಗಳನ್ನು ಬೀರಬಹುದು ಎನ್ನುವ ವಿಷಯವನ್ನೂ ಪರಿಗಣಿಸಿ.

2.16

ತಿಳಿವಳಿಕೆಯುಳ್ಳ ಸಮ್ಮತಿ ಪ್ರಕ್ರಿಯೆಯು ಸಂಶೋಧನಾ ತಂಡದ ಭಾಗವಹಿಸುವಿಕೆಯ ಮಿತಿಗಳನ್ನು ಸ್ಪಷ್ಟವಾಗಿ ವಿವರಿಸುತ್ತದೆ ಹಾಗೂ ಖಾಸಗಿತನ ಹಾಗೂ ಗೌಪ್ಯತೆಗಳನ್ನು ಯಾವ ರೀತಿ ಕಾಪಾಡಲಾಗುತ್ತದೆ ಹಾಗೂ ಕಾಪಾಡಲಾಗುವುದಿಲ್ಲ ಎಂಬ ವಿಷಯಗಳನ್ನು ಸ್ಪಷ್ಟವಾಗಿ ವಿವರಿಸುತ್ತದೆ (ಉದಾಹರಣೆಗೆ ಕಡ್ಡಾಯ ವರದಿಗಾರಿಕೆಯು ನಿಮ್ಮ ಸಂಶೋಧನೆಯ ಮೇಲೆ ಪ್ರಭಾವ ಬೀರುವಾಗ)

2.17

ಅಂತಿಮ ಸಂಶೋಧನಾ ವರದಿಯು ಸಂಶೋಧನೆಯ ವಿನ್ಯಾಸ, ಬಳಸಿರುವ ಸಾಧನಗಳು, ಅಧ್ಯಯನದ ಮಿತಿಗಳು ಹಾಗೂ ನೈತಿಕ ಪರಿಗಣನೆಗಳನ್ನು ಸಂಪೂರ್ಣವಾಗಿ ವಿವರಿಸುವಂತಹ ವಿಧಾನವನ್ನು ಒಳಗೊಂಡಿರಬೇಕು

2.18

ಭಾಗವಹಿಸಿದವರಿಗೆ ಸಂಶೋಧನೆಯ ಫಲಿತಾಂಶಗಳ ಕುರಿತು ಹಿಮ್ಮಾಹಿತಿಯನ್ನು ನೀಡಲು ಒಂದು ಪ್ರಕ್ರಿಯೆಯನ್ನು ಗುರುತಿಸಿ (ಉದಾಹರಣೆಗೆ ವರದಿಯ ಮಗು-ಸ್ನೇಹಿ ಆವೃತ್ತಿಯನ್ನು ಭಾಗವಹಿಸಿದವರಿಗೆ ಒದಗಿಸುವುದು).

## 3. ತಿಳಿವಳಿಕೆಯುಳ್ಳ ಸಹಮತಿ

'ಸಹಮತಿ' ಎಂದರೆ ನಿಮ್ಮ ಯೋಜನೆಯಲ್ಲಿ ಭಾಗವಹಿಸಲು ಔಪಚಾರಿಕ ಅನುಮತಿ ಪಡೆಯುವುದು ಎಂದರ್ಥ. ಕೆಲವು ರಾಷ್ಟ್ರಗಳಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರೊಂದಿಗೆ ನಡೆಸುವ ಯಾವುದೇ ಸಂಶೋಧನೆಗೆ ನೀವು ಕಾನೂನು ಸಮ್ಮತಿಯನ್ನು ಪಡೆದುಕೊಂಡಿರಬೇಕು. ಸಾಮಾನ್ಯವಾಗಿ ಮಕ್ಕಳು ಒಳಗೊಂಡಿರುವಂತಹ ಸಂಶೋಧನೆಗೆ ಆ ಮಕ್ಕಳ ಪೋಷಕರು ಅಥವಾ ಪಾಲಕರಿಂದ ಸಮ್ಮತಿಯನ್ನು ಪಡೆಯಬೇಕು, ಏಕೆಂದರೆ ಕಾನೂನಿನ ಪ್ರಕಾರ ಮಕ್ಕಳು ಅನುಮತಿ ಅಥವಾ ಸಮ್ಮತಿ ನೀಡುವಷ್ಟು ಪ್ರಬುದ್ಧತೆಯನ್ನು ಹೊಂದಿರುವುದಿಲ್ಲ. ಸಂಕಷ್ಟಕ್ಕೀಡಾಗಿರುವ ಮಕ್ಕಳಾಗಿದ್ದರೆ (ಲೈಂಗಿಕ ಶೋಷಣೆಯ ಸಂತ್ರಸ್ತರು), ಪೋಷಕರಲ್ಲದೆ ವಯಸ್ಕರು ಆ ಮಕ್ಕಳ ಪಾಲನೆಯನ್ನು ನೋಡಿಕೊಳ್ಳುತ್ತಿರುತ್ತಾರೆ. ಹಾಗಾಗಿ ಮಗುವಿನ ಮೇಲೆ ಕಾನೂನಿನ ಪ್ರಕಾರ ಜವಾಬ್ದಾರಿಯನ್ನು ಹೊಂದಿರುವಂತಹ ವಯಸ್ಕರಿಂದ ಸಮ್ಮತಿಯನ್ನು ಪಡೆದುಕೊಳ್ಳುವುದು ಯಾವಾಗಲೂ ಒಳ್ಳೆಯದು (ಕೆಲವು ಬಹಳ ನಿರ್ದಿಷ್ಟವಾದ ಸಂದರ್ಭಗಳಲ್ಲಿ[5] ಹಾಗೂ ಪಾಲಕರೇ ಅಪರಾಧಿಯಾಗಿರುವಂತಹ ಅಪರೂಪದ ಪ್ರಕರಣಗಳನ್ನು ಹೊರತುಪಡಿಸಿ).

ಕೆಲವು ಪ್ರಕರಣಗಳಲ್ಲಿ, ಸ್ವತಂತ್ರವಾಗಿ ವಾಸಿಸುತ್ತಿರುವಂತಹ ಮಗುವಾಗಿದ್ದಲ್ಲಿ (ಉದಾಹರಣೆಗೆ ಕೆಲಸ ಮಾಡುತ್ತಿರುವ ಮಗು, ಮನೆಯಿಂದ ವಲಸೆ ಬಂದು, ರಸ್ತೆಯಲ್ಲಿ ಜೀವಿಸುತ್ತಿರುವ ಮಗು) ಹಾಗೂ ಸಾಕಷ್ಟು ಪ್ರೌಢಿಮೆಯನ್ನು ಹೊಂದಿದೆ ಎಂದು ಖಾತ್ರಿಯಾದಲ್ಲಿ, ಪೋಷಕರು/ಪಾಲಕರ ಸಮ್ಮತಿ ಬೇಕಾಗಿರುವುದಿಲ್ಲ. ಆದರೆ ಇಂತಹ ಸಂದರ್ಭದಲ್ಲಿ ನಿರ್ಧಾರಗಳನ್ನು ಕೈಗೊಳ್ಳಲು ಬಹಳ ಎಚ್ಚರಿಕೆಗಳನ್ನು ವಹಿಸಬೇಕು ಹಾಗೂ ತಜ್ಞರೊಂದಿಗೆ ಸಮಾಲೋಚನೆ ನಡೆಸಿ ಅವರ ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕು.

## ನೈತಿಕ ಕಾರ್ಯಗಳು

**3.1** ನಿಮ್ಮ ದೇಶದಲ್ಲಿರುವ ಪೋಷಕರು/ಪಾಲಕರು/ಮಕ್ಕಳಿಂದ ತಿಳಿವಳಿಕೆಯುಳ್ಳ ಸಮ್ಮತಿಯನ್ನು ಪಡೆಯಲು ಕಾನೂನು ಅಗತ್ಯವನ್ನು ಪರಿಶೀಲಿಸಲಾಗಿದೆ.

**3.2** ಯಾವುದೇ ಬಲವಂತ ಅಥವಾ ಒತ್ತಡದ ಸಾಧ್ಯತೆಗಳಿಲ್ಲದೆ, ಪೋಷಕರು/ಪಾಲಕರಿಂದ (ಅವರು ಸಾಕ್ಷರಸ್ಥರ ಎಂಬ ಪರಿಗಣನೆಯೊಂದಿಗೆ) ತಿಳಿವಳಿಕೆಯುಳ್ಳ ಸಮ್ಮತಿಯನ್ನು ಪಡೆಯಲು ಸೂಕ್ತ ಕಾನೂನು ಪ್ರಕ್ರಿಯೆಯನ್ನು ಒಳಪಡಿಸಲಾಗಿದೆ.

**3.3** ಓರ್ವ ಪೋಷಕ/ಪಾಲಕರೇ ಅಪರಾಧಿ ಎಂಬ ಸಂಶಯವಿರುವ ಸಂದರ್ಭಗಳಲ್ಲಿ ಸಮ್ಮತಿಯನ್ನು ಪಡೆಯಲು ಏನು ಮಾಡಬೇಕು ಎಂಬುದನ್ನು ನಿಮ್ಮ ಸಂಶೋಧನೆಯ ವಿನ್ಯಾಸದಲ್ಲಿ ನೀವು ವಿವರಿಸಿರಬೇಕು.

**3.4** ಸಮ್ಮತಿಯನ್ನು ನೀಡಲು ಮಗು ಎಷ್ಟು ಮುಕ್ತವಾಗಿದೆ ಎಂಬ ವಿಷಯದ ಮೇಲೆ ಪ್ರಭಾವ ಬೀರುವಂತಹ ಲಿಂಗಸಂವೇದಿ ನಿಯಮಗಳು, ಸಾಂಸ್ಕೃತಿಕ ವ್ಯತ್ಯಾಸಗಳು ಹಾಗೂ ವಯಸ್ಸಿನಂತಹ ಸಂಭವನೀಯ ಪ್ರಭಾವಗಳನ್ನು ಪರಿಗಣಿಸಲಾಗಿದೆ.

**3.5** ಭಾಗವಹಿಸುವ ಮಕ್ಕಳಿಂದ ವಯಸ್ಸಿಗೆ ಸೂಕ್ತವಾದಂತಹ, ಮಗುಸ್ನೇಹಿ ಹಾಗೂ ಯಾವುದೇ ಒತ್ತಡ ಅಥವಾ ಬಲವಂತದ ಸಾಧ್ಯತೆಗಳಿಲ್ಲದಿರುವಂತಹ ತಿಳಿವಳಿಕೆಯುಳ್ಳ ಸಮ್ಮತಿಯನ್ನು ಪಡೆಯುವ ಪ್ರಕ್ರಿಯೆಯನ್ನು ಒಳಗೊಂಡಿದೆ.

**3.6** ಒಂದು ವೇಳೆ ಮಗುವಿಗೆ ಭಾಗವಹಿಸಲು ಇಷ್ಟವಿದ್ದು ಪೋಷಕರು ಇಷ್ಟಪಡದಿದ್ದಲ್ಲಿ ಹಾಗೂ ಇದಕ್ಕೆ ತದ್ವಿರುದ್ಧವಾದ ಸನ್ನಿವೇಶ ಎದುರಾದಲ್ಲಿ ಏನು ಮಾಡಬೇಕೆಂಬ ಸ್ಪಷ್ಟವಾದ ಮಾರ್ಗಸೂಚಿಗಳಿವೆ.

**3.7** ಯೋಜನೆಯು ಭಾಗವಹಿಸುವ ಪ್ರತಿಯೊಬ್ಬರ ಸಮ್ಮತಿ ಹಾಗೂ ಒಪ್ಪಿಗೆಯ ದಾಖಲೆಯನ್ನು (ಲಿಖಿತ ಅಥವಾ ರೆಕಾರ್ಡ್ ಮಾಡಿರುವ) ಇಟ್ಟುಕೊಂಡಿರಬೇಕು.

**3.8** ಸಮ್ಮತಿಯನ್ನು ಪಡೆಯುವಾಗ ಪೋಷಕರು/ಪಾಲಕರಿಗೆ ಲಿಖಿತ ಹಾಗೂ ಮೌಖಿಕವಾಗಿ (ಸಂಶೋಧನೆ, ಅವಧಿ, ಖಾಸಗಿತನ, ಯಾವುದಾದರೂ ಪರಿಹಾರದ ವಿವರಗಳು, ಫಲಿತಾಂಶಗಳನ್ನು ಯಾವ ರೀತಿ ಬಳಸಿಕೊಳ್ಳಲಾಗುತ್ತದೆ, ಯಾವ ರೀತಿ ಹಿಂದಕ್ಕೆ ಪಡೆಯುವುದು ಅಥವಾ ದೂರು ನೀಡುವುದು) ಎರಡೂ ರೂಪಗಳಲ್ಲಿ ಸ್ಪಷ್ಟವಾದ ಮಾಹಿತಿಯನ್ನು ನೀಡಬೇಕು.

**3.9** ಸಮ್ಮತಿಯನ್ನು ಪಡೆಯುವಾಗ ಮಕ್ಕಳಿಗೆ ಲಿಖಿತ ಹಾಗೂ ಮೌಖಿಕ ಎರಡೂ ರೂಪಗಳಲ್ಲಿ ಸ್ಪಷ್ಟ, ವಯಸ್ಸಿಗೆ ಸೂಕ್ತವಾದ ಮಾಹಿತಿಯನ್ನು (ಸಂಶೋಧನೆಯ ಉದ್ದೇಶ, ಅವಧಿ, ಖಾಸಗಿತನ, ಯಾವುದಾದರೂ ಪರಿಹಾರ ಇದ್ದಲ್ಲಿ ಅದರ ವಿವರಗಳು, ಫಲಿತಾಂಶಗಳನ್ನು ಯಾವ ರೀತಿ ಬಳಸಿಕೊಳ್ಳಲಾಗುತ್ತದೆ, ಯಾವ ರೀತಿ ಹಿಂದಕ್ಕೆ ಪಡೆಯುವುದು ಅಥವಾ ದೂರು ನೀಡುವುದು) ಒದಗಿಸಬೇಕು.

---

5 ಉದಾಹರಣೆಗೆ, ಡಬ್ಲ್ಯೂಹೆಚ್‌ಒ ಕಾನೂನು ಅವಕಾಶಗಳು ಅಸ್ತಿತ್ವದಲ್ಲಿ ಇಲ್ಲದ ಹೊರತು, ಲೈಂಗಿಕ ಆರೋಗ್ಯ ಸಂಶೋಧನೆಗಾಗಿ, ಕೆಲವು ಲೈಂಗಿಕ ಆರೋಗ್ಯ ಅಧ್ಯಯನಗಳ ಉದ್ದೇಶವನ್ನು ಅರ್ಥಮಾಡಿಕೊಳ್ಳುವಷ್ಟು, ತಮ್ಮ ಸ್ವಂತ ಬುದ್ಧಿಯಿಂದ ಸಮ್ಮತಿಯನ್ನು ಸೂಚಿಸುವಷ್ಟು ಪ್ರೌಢಿಮೆಯನ್ನು ಹೊಂದಿರುವಂತಹ ಹದಿಹರೆಯದವರನ್ನು ಪರಿಗಣಿಸುವುದು ಸೂಕ್ತ.

ಕಾನೂನಾತ್ಮಕವಾಗಿ ಸದಾ ಅಗತ್ಯವಿಲ್ಲದಿದ್ದರೂ ಸಹ ಮಕ್ಕಳನ್ನು ಒಳಗೊಂಡಂತಹ ಸಂಶೋಧನೆಗಳಲ್ಲಿ ಭಾಗವಹಿಸುವ ಮಗುವಿನಿಂದಲೂ 'ಸಮ್ಮತಿ'ಯನ್ನು ಪಡೆದುಕೊಳ್ಳುವುದು ತಾತ್ವಿಕವಾಗಿಯೂ ಸೂಕ್ತ. 'ಸಮ್ಮತಿ'ಯನ್ನು ಪಡೆದುಕೊಳ್ಳುವುದು ಎಂದರೆ ಮಗುವಿನಿಂದ ತಾನು ಭಾಗವಹಿಸಲು ಬಯಸುತ್ತೇನೆ ಎಂದು ಔಪಚಾರಿಕವಾಗಿ ಅನುಮತಿಯನ್ನು ಪಡೆದುಕೊಳ್ಳುವುದು (ಕೇವಲ ತನ್ನ ಪೋಷಕ/ಪಾಲಕರು ಹೇಳಿದರು ಎನ್ನುವ ಕಾರಣಕ್ಕಾಗಿ ಒಪ್ಪಿಗೆ ಸೂಚಿಸುವುದಷ್ಟೇ ಅಲ್ಲ). ಮಕ್ಕಳಿಗೆ ಭಾಗವಹಿಸುವ ಹಕ್ಕಿದೆ, ಆದರೆ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಬೇಕೆ ಅಥವಾ ಬೇಡವೇ ಎಂಬ ಆಯ್ಕೆಯನ್ನು ಮಾಡಲೂ ಸಹ ಅವರಿಗೆ ಹಕ್ಕಿದೆ.[6] ಅಂದರೆ "ಮಗುವಿನ ಮೇಲೆ ಒತ್ತಡ ಹೇರುವುದು ಅಥವಾ ಪ್ರಭಾವವನ್ನು ಬೀರಿ ದಾರಿ ತಪ್ಪಿಸುವಂತಿಲ್ಲ."[7]

ಸಮ್ಮತಿ ಹಾಗೂ ಒಪ್ಪಿಗೆಯನ್ನು ಪಡೆದುಕೊಳ್ಳಲು ನೀವು ಪೋಷಕರು/ಪಾಲಕರು ಹಾಗೂ ಮಗುವಿಗೆ ನಿಮ್ಮ ಸಂಶೋಧನೆಯ ಕುರಿತು ಸಂಪೂರ್ಣವಾದ 'ಮಾಹಿತಿ'ಯನ್ನು ಒದಗಿಸಬೇಕು. ಮಕ್ಕಳಿಗೆ, ಅವರ ವಯಸ್ಸು ಹಾಗೂ ಪ್ರಪಂಚವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯಕ್ಕೆ ಅನುಗುಣವಾದ ರೀತಿಯಲ್ಲಿ ನೀವು ಅವರಿಗೆ ಸರಿಯಾಗಿ ಅರ್ಥವಾಗುವ ಪದಗಳಲ್ಲಿ ವಿವರಿಸಬೇಕು (ಅವರ ಪ್ರೌಢಿಮೆ, ಭಾಷಾ ಕೌಶಲ್ಯಗಳು, ಸಂಭವನೀಯ ಶಾರೀರಿಕ ದುರ್ಬಲತೆಗಳು, ಆಘಾತ ಹಾಗೂ ಚೇತರಿಸಿಕೊಳ್ಳುವ ಪ್ರಕ್ರಿಯೆಯೊಳಗಿನ ಹಂತ). ಸಮ್ಮತಿ/ಒಪ್ಪಿಗೆಯನ್ನು ಸೂಚಿಸುವುದು, ಅಥವಾ ಸ್ವಲ್ಪ ಸಮಯದ ನಂತರ ಅದನ್ನು ಹಿಂದಕ್ಕೆ ಪಡೆದುಕೊಳ್ಳುವುದರಿಂದಾಗಿ ಮಗುವಿನ ಮೇಲೆ ಅಥವಾ ಅವರ ಭವಿಷ್ಯದ ಯಾವುದೇ ಪರಸ್ಪರ ಸಂಭಾಷಣೆಗಳ ಮೇಲೆ ಯಾವುದೇ ರೀತಿಯ ಪರಿಣಾಮಗಳಾಗುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ವಿವರಿಸಬೇಕು. ಸಮ್ಮತಿಯನ್ನು ಮೌಖಿಕವಾಗಿ (ಜೋರಾಗಿ ಓದಿ ಹೇಳುವ ಅಥವಾ ಸ್ಪಷ್ಟವಾದ ಚರ್ಚೆಯ ಮೂಲಕ ನೀಡುವ ಹೇಳಿಕೆ) ಅಥವಾ ಲಿಖಿತ ರೂಪದಲ್ಲಿ (ಸಿದ್ಧಪಡಿಸಿರುವ ನಮೂನೆಯ ಮೇಲೆ) ನೀಡಬಹುದು.

3.10 ನೀವು ನೀಡಿದಂತಹ ಮಾಹಿತಿಯು ನಿಮ್ಮ ಗುರಿ ಗುಂಪಿಗೆ ಸೂಕ್ತವಾಗುವ ಹಾಗೂ ಅರ್ಥವಾಗುವ ಹಾಗಿದೆ ಎಂದು ಖಾತ್ರಿಪಡಿಸಿಕೊಳ್ಳಲು ಪರಿಶೀಲಿಸಲಾಗಿದೆ.

3.11 ನೀವು ನೀಡಿದಂತಹ ಮಾಹಿತಿಯು ಸಂಶೋಧನೆಯಲ್ಲಿ ಭಾಗವಹಿಸುವುದರಿಂದ ಆಗುವ ಲಾಭಗಳಂತಹ ಅವಾಸ್ತವಿಕವಾದ ನಿರೀಕ್ಷೆಗಳನ್ನು ಒಳಗೊಂಡಿಲ್ಲ ಅಥವಾ ಲಭ್ಯವಿರುವ ಸೇವೆಗಳನ್ನು ಪಡೆಯುವ ಅವಾಸ್ತವಿಕ ನಿರೀಕ್ಷೆಗಳನ್ನು ಒಳಗೊಂಡಿಲ್ಲ.

3.12 ಮಾಹಿತಿಪೂರ್ವಕ ಸಮ್ಮತಿ/ಒಪ್ಪಿಗೆಯನ್ನು ಪಡೆಯುವುದು ಹೇಗೆ ಎಂದು ಸಂಶೋಧನಾ ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗಿದೆ.

3.13 ಸಂಬಂಧಪಟ್ಟ ಭಾಗೀದಾರರೊಂದಿಗೆ (ಸ್ಥಳೀಯ ಮಕ್ಕಳ ಗಮನಕೇಂದ್ರಿತ ಎನ್‌ಜಿಒಗಳು, ಪೂರಕ ಮಕ್ಕಳ ಸೇವೆ ಒದಗಿಸುವವರು ಹಾಗೂ ಸಂಭವನೀಯವಾಗಿ ಮಕ್ಕಳು ಸ್ವತಃ) ಸಮಾಲೋಚನೆಯ ಮೂಲಕ ಸಂಶೋಧನೆಯಲ್ಲಿ ಭಾಗವಹಿಸುವುದರಿಂದ ಉದ್ಭವಿಸಬಹುದಾದಂತಹ ಅಪಾಯಗಳನ್ನು ಅಂದಾಜಿಸಲಾಗಿದೆ ಹಾಗೂ ಅವುಗಳನ್ನು ಪೋಷಕರು/ಪಾಲಕರು, ಹಾಗೂ ಮಕ್ಕಳಿಗೆ ವಿವರಿಸಲಾಗಿದೆ.

3.14 ಭಾಗವಹಿಸುವವರ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮಗಳಿಲ್ಲದೆ ಯೋಜನೆಯ ಸಮಯದಲ್ಲಿ ಯಾವುದೇ ಗುರುತಿಸಲ್ಪಟ್ಟಂತಹ ಸಂದರ್ಭದವರೆಗೆ, ಭಾಗವಹಿಸುವಿಕೆ ಸ್ವಯಂಪ್ರೇರಿತ ಹಾಗೂ ಪ್ರತಿಕ್ರಿಯೆಗಳು/ದತ್ತಾಂಶವನ್ನು ಹಿಂದಕ್ಕೆ ಪಡೆಯಬಹುದು ಎಂದು ವಿವರಿಸಲಾಗಿದೆ.

3.15 ಸಂಶೋಧಕರಿಂದ ಮುಂದಿನ ದಿನಗಳಲ್ಲಿ ಪ್ರಶ್ನೆಗಳನ್ನು ಕೇಳಲು ಅಥವಾ ಹೆಚ್ಚಿನ ಮಾಹಿತಿಯನ್ನು ಕೋರಲು ಅಥವಾ ನೀಡಿದಂತಹ ಪ್ರತಿಕ್ರಿಯೆ/ಉತ್ತರಗಳನ್ನು ಹಿಂದಕ್ಕೆ ಪಡೆಯುವ ಉದ್ದೇಶದಿಂದ ಸಂಪರ್ಕ ವಿವರಗಳನ್ನು ಒದಗಿಸಲಾಗಿದೆ.

3.16 ಭಾಗವಹಿಸುವವರ ಮೇಲೆ 'ಹೌದು' ಎಂಬ ಉತ್ತರ ನೀಡಲು ಯಾವುದೇ ರೀತಿಯ ಒತ್ತಡವಾಗದಿರುವಂತೆ ಖಾತ್ರಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

3.17 ಯೋಜನೆಯ ಕುರಿತಾದ ಮಾಹಿತಿಯನ್ನು ಒದಗಿಸಲು ಹಾಗೂ ವಯಸ್ಕರು ಹಾಗೂ ಮಕ್ಕಳಿಗೆ ಆಲೋಚಿಸಲು ಅಥವಾ ಭಾಗವಹಿಸುವ ಕುರಿತು ನಿರ್ಧಾರ ಕೈಗೊಳ್ಳಲು ಇತರರೊಂದಿಗೆ ಸಮಾಲೋಚಿಸಲು ಸಮಯವನ್ನು ನೀಡುವ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

3.18 ತಿಳಿವಳಿಕೆಯುಳ್ಳ ಸಮ್ಮತಿ ಪ್ರಕ್ರಿಯೆಗಳು, ಉದ್ಭವಿಸಬಹುದಾದ ಸಂಭವನೀಯ ತೊಂದರೆಗಳು ಹಾಗೂ ಯಾವ ರೀತಿ ಬೆಂಬಲವನ್ನು ಪಡೆದುಕೊಳ್ಳಬಹುದು ಎಂದು ವಿವರಿಸುತ್ತದೆ.

6 Article 12 UN CRC and Committee of the Rights of the Child, (2009). *General comment 12: The right of the child to be heard.* Paragraph 22.

7 Committee of the Rights of the Child, (2009). *General comment 12: The right of the child to be heard.* Paragraph 22.

## 4. ಖಾಸಗಿತನ ಹಾಗೂ ಗೌಪ್ಯತೆ

ಸಂಶೋಧನೆಯಲ್ಲಿ ಭಾಗವಹಿಸುವಂತಹ ಎಲ್ಲರಿಗೂ ಖಾಸಗಿತನದ ಮಾನವ ಹಕ್ಕಿದೆ. ಮಕ್ಕಳನ್ನು ಒಳಗೊಂಡಂತಹ ಲೈಂಗಿಕ ಶೋಷಣೆಯ ಸಂಶೋಧನೆಗಳಲ್ಲಿ ಖಾಸಗಿತನ ಹಾಗೂ ಗೌಪ್ಯತೆಯನ್ನು ಕಾಪಾಡುವ ಸಂಬಂಧ ಸಾಧಾರಣವಾಗಿ ತೆಗೆದುಕೊಳ್ಳುವ ಎಚ್ಚರಿಕೆಗಳಿಗಿಂತ ಹೆಚ್ಚಿನ ಎಚ್ಚರಿಕೆಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ, ಏಕೆಂದರೆ ಇಂತಹ ಮಾಹಿತಿಯನ್ನು ಹಂಚಿಕೊಳ್ಳುವುದಿಂದ ಅನೇಕ ನಕಾರಾತ್ಮಕ ಪರಿಣಾಮಗಳು ಉಂಟಾಗುವ ಸಾಧ್ಯತೆ ಇರುತ್ತದೆ. ಜೊತೆಗೆ ನಿರ್ಧಿಷ್ಟವಾದ ಸಂಶೋಧನಾ ಉದ್ದೇಶಗಳಿಗೆ ಅಗತ್ಯವಾಗಿರುವಂತಹ ವೈಯಕ್ತಿಕ ಮಾಹಿತಿ ಅಥವಾ ದತ್ತಾಂಶವನ್ನು ಸಂಗ್ರಹಿಸುವುದನ್ನು ತಪ್ಪಿಸಿ (ಉದಾಹರಣೆಗೆ, ಮಕ್ಕಳ ಮೇಲಿನ ನಿಂದನೆಯ ವಿವರಗಳನ್ನು ಕೇಳುವುದಕ್ಕಿಂತ ಭಾಗವಹಿಸುವವರು ಚೇತರಿಸಿಕೊಳ್ಳುವ ವಿಷಯದ ಕಡೆ ಗಮನ ನೀಡಿ).

# ನೈತಿಕ ಕಾರ್ಯಗಳು

4.1 ಈ ಸಂಶೋಧನೆಯನ್ನು ಮಕ್ಕಳ ಭಾಗವಹಿಸುವ ಗೌಪ್ಯತೆಗಾಗಿ ವಿನ್ಯಾಸಪಡಿಸಲಾಗಿದೆ, ಈ ನಿಯಮ ಉಲ್ಲಂಘನೆಗೆ ಬಲಿಷ್ಟವಾದ ಕಾರಣಗಳಿಲ್ಲದ ಹೊರತು.

4.2 ದತ್ತಾಂಶ ಸಂಗ್ರಹದ ವಿಧಾನವು ಮಕ್ಕಳ ಖಾಸಗಿತನವನ್ನು ರಕ್ಷಿಸುತ್ತದೆ, ಅದರಲ್ಲಿಯೂ ಅವರು ವೈಯಕ್ತಿಕ ಮಾಹಿತಿಯನ್ನು ತಿಳಿಸಿರುವಂತಹ ಸಂದರ್ಭದಲ್ಲಿ (ಉದಾಹರಣೆಗೆ: ಗುಂಪು ಸಿದ್ಧತೆಗಳು ಯಾವಾಗಲೂ ಸೂಕ್ತವಾಗಿರುವುದಿಲ್ಲ ಹಾಗೂ ಇದನ್ನು ಬಳಸಬೇಕಾದರೆ ಖಾಸಗಿತನವನ್ನು ರಕ್ಷಿಸಲು ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳಬೇಕು). ವಿಧಾನಗಳ ಕುರಿತು ಮಕ್ಕಳೊಂದಿಗೆ ಸಮಾಲೋಚಿಸಬೇಕು.

4.3 ಸಂಶೋಧನೆ ನಡೆಸುವ ಸ್ಥಳವನ್ನು ಆಯ್ಕೆ ಮಾಡುವಾಗ, ಮಕ್ಕಳು ನೀಡುವ ಪ್ರತಿಕ್ರಿಯೆಗಳನ್ನು ಬೇರೊಬ್ಬರು ಕೇಳಿಸಿಕೊಳ್ಳದಿರುವಂತೆ ಅಥವಾ ಲಿಖಿತ ಉತ್ತರಗಳನ್ನು ಬೇರೊಬ್ಬರು ನೋಡದಿರುವಂತೆ ಎಚ್ಚರಿಕೆ ವಹಿಸಬೇಕು.

4.4 ಖಾಸಗಿಯಾಗಿರುವಾಗ ಸ್ಥಳವು ಸುರಕ್ಷತಾ ತತ್ವಗಳು (ಇತರರಿಗೆ ಗೋಚರಿಸುವಂತಿರಬೇಕು, ಮಕ್ಕಳೊಂದಿಗೆ ಕೇವಲ ವಯಸ್ಕರು ಮಾತ್ರ ಇರಬಾರದು) ಹಾಗೂ ನಿಮ್ಮ ನೀತಿ ಅಗತ್ಯಗಳನ್ನು ಪೂರೈಸುವಂತಿರಬೇಕು.

4.5 ಚಿಕ್ಕ ಮಕ್ಕಳಿದ್ದರೆ, ದತ್ತಾಂಶ ಸಂಗ್ರಹಿಸುವಾಗ ಮಕ್ಕಳ ಕಡೆಯ ನಂಬಿಕಸ್ಥ ವಯಸ್ಕರೊಬ್ಬರಿರಬೇಕು.

4.6 ಸಂಶೋಧನೆ ನಡೆಸುವ ಸ್ಥಳವು ಮಕ್ಕಳನ್ನು ಪ್ರಾಸಂಗಿಕವಾಗಿ ಲೈಂಗಿಕ ಶೋಷಣೆಗೆ ಸಂಪರ್ಕ ಹೊಂದುವ ಅಪಾಯದಲ್ಲಿ ದೂಡದಿರುವಂತೆ ಇರಬೇಕು.

4.7 ತಿಳಿವಳಿಕೆಯುಳ್ಳ ಸಮ್ಮತಿ ಮಾಹಿತಿಯು ಗೌಪ್ಯತೆಯ ವಿಸ್ತಾರ ಹಾಗೂ ಮಿತಿಗಳನ್ನು ಸ್ಪಷ್ಟವಾಗಿ ವಿವರಿಸುತ್ತದೆ.

4.8 ತರಬೇತಿಯ ಸಮಯದಲ್ಲಿ ದತ್ತಾಂಶ ಸಂಗ್ರಹಿಸುವವರಿಗೆ ಖಾಸಗಿತನ ಹಾಗೂ ಗೌಪ್ಯತೆಗಳಿಗೆ (ಕಡ್ಡಾಯ ವರದಿಗಾರಿಕೆಯಂತಹ ಅದರ ಮಿತಿಗಳು) ಸಂಬಂಧಪಟ್ಟ ಕಾನೂನು ಅಗತ್ಯಗಳನ್ನು ವಿವರಿಸಲಾಗಿದೆ.

ಖಾಸಗಿತನ ಹಾಗೂ ಗೌಪ್ಯತೆಗೆ ಸಂಬಂಧಪಟ್ಟ ಅಪಾಯಗಳು ಉಂಟಾಗಬಹುದು ಹಾಗೂ ಸಂಶೋಧನಾ ಪ್ರಕ್ರಿಯೆಯ ಉದ್ದಕ್ಕೂ ಪರಿಗಣಿಸಬೇಕು. ಇದು ನೇಮಕಾತಿ, ಪ್ರಾಥಮಿಕ ದತ್ತಾಂಶ ಸಂಗ್ರಹ, ಮಾಹಿತಿಯ ವಿಶ್ಲೇಷಣೆ, ಫಲಿತಾಂಶಗಳ ಹಂಚಿಕೆ, ದತ್ತಾಂಶ ಶೇಖರಣೆ, ಪ್ರಸಾರ ಹಾಗೂ ಮಾಹಿತಿಯನ್ನು ಶೇಖರಿಸಿರುವಂತಹ ಕಡತಗಳು ಅಥವಾ ಪರಿಕರಗಳ ವಿಲೇವಾರಿ ಇದರಲ್ಲಿ ಒಳಗೊಂಡಿವೆ.

ಸಂಶೋಧಕರು ಯಾವಾಗಲೂ ಗೌಪ್ಯತೆಯನ್ನು ನಿರ್ವಹಿಸುವ ಗುರಿಯನ್ನು ಹೊಂದಿರಬೇಕು. ಆದರೆ ಯಾವುದಾದರೂ ಒಂದು ಮಗು ಅಪಾಯದಲ್ಲಿದ್ದರೆ, ಸುರಕ್ಷತೆಗಾಗಿ ಗೌಪ್ಯತೆ ಬಹಿರಂಗಗೊಳ್ಳುವ ಸನ್ನಿವೇಶಗಳು ಎದುರಾಗಬಹುದಾಗಿದ್ದು, ಇದು ತಾತ್ವಿಕ ಸಂದಿಗ್ಧತೆಯನ್ನು ಸೃಷ್ಟಿಸುತ್ತದೆ. ಇದನ್ನು ಭಾಗವಹಿಸುವ ಮಗುವಿಗೆ ಪಾರದರ್ಶಕ ರೀತಿಯಲ್ಲಿ ವಿವರಿಸಬೇಕು. ಮಕ್ಕಳ–ಸಂಬಂಧಿತ ಅಪರಾಧಗಳು ಹಾಗೂ ಕಾನೂನುಬಾಹಿರ ಚಟುವಟಿಕೆಗಳ 'ಕಡ್ಡಾಯ ವರದಿ'ಗಾರಿಕೆಗಾಗಿ ರಾಷ್ಟ್ರೀಯ ಕಾನೂನು ಅಗತ್ಯಗಳಿದ್ದು, ಇವುಗಳನ್ನು ಪರಿಗಣಿಸಬೇಕು.

**4.9**

ಭಾಗವಹಿಸುವವರನ್ನು ಗುರುತಿಸುವಂತಹ ಯಾವುದೇ ಮಾಹಿತಿಯನ್ನು ದತ್ತಾಂಶ, ಟ್ರಾನ್ಸ್‌ಕ್ರಿಪ್ಟ್‌ಗಳಿಂದ ಪ್ರತ್ಯೇಕವಾಗಿ ಇಡಲಾಗುತ್ತದೆ (ಪ್ರತ್ಯೇಕವಾಗಿ ಹಾಗೂ ಸುರಕ್ಷಿತವಾಗಿ ಶೇಖರಿಸಲಾಗುವ ಪಟ್ಟಿಯೊಂದಿಗೆ ಹೆಸರುಗಳನ್ನು ದತ್ತಾಂಶದೊಂದಿಗೆ ಸಂಪರ್ಕ ಕಲ್ಪಿಸುವ ಮೂಲಕ ಐಡಿ ಸಂಖ್ಯೆಗಳನ್ನು ಬಳಸಿ).

**4.10**

ದತ್ತಾಂಶವನ್ನು ಸಂಶೋಧಕರಿಗೆ ಮಾತ್ರ ದೊರೆಯುವಂತಹ ಪಾಸ್‌ವರ್ಡ್‌ನೊಂದಿಗೆ ನಿರ್ಬಂಧಿತ ಫೋಲ್ಡರ್‌ಗಳಲ್ಲಿ ವಿದ್ಯುನ್ಮಾನ ರೂಪದಲ್ಲಿ ಶೇಖರಿಸಲಾಗುತ್ತದೆ.

**4.11**

ದತ್ತಾಂಶದ ಹಾರ್ಡ್ ಕಾಪಿಗಳನ್ನು ಲಾಕ್ ಮಾಡಿರುವ ಸ್ಟೋರೇಜ್‌ನಲ್ಲಿ ಸುರಕ್ಷಿತವಾಗಿ ಇಡಲಾಗುತ್ತದೆ.

**4.12**

ದತ್ತಾಂಶವನ್ನು, ಇಮೇಲ್ ಅಥವಾ ಕ್ಲೌಡ್ ಸ್ಟೋರೇಜ್‌ನಂತಹ ಅಸುರಕ್ಷಿತ ವಿಧಾನಗಳಲ್ಲಿ ಹಂಚಿಕೊಳ್ಳಲಾಗಿರುವ ವಿಧಾನಗಳ ಮೂಲಕ ಒದಗಿಸಲಾಗುವುದಿಲ್ಲ.

**4.13**

ದತ್ತಾಂಶವನ್ನು ಉಳಿಸಿಕೊಂಡು, ಸ್ವಲ್ಪ ಪೂರ್ವನಿರ್ಧರಿತ ಸಮಯದ ನಂತರ ನಾಶಪಡಿಸಲಾಗುತ್ತದೆ (ಪ್ರಕಟಿಸಿದ ಒಂದರಿಂದ ಐದು ವರ್ಷಗಳೊಳಗೆ).

**4.14**

ಸಂಶೋಧನೆಯ ಬರವಣಿಗೆಯಲ್ಲಿರುವ ನಕಲಿ ಹೆಸರುಗಳು ಅಥವಾ ಭಾಗವಹಿಸುವವರ ಸಂಕೇತಗಳನ್ನು (ಕೋಡ್‌ಗಳು) ಭಾಗವಹಿಸುವ ಯಾವುದೇ ವ್ಯಕ್ತಿಯ ಗುರುತು ಬಹಿರಂಗಗೊಳ್ಳದಿರುವುದನ್ನು ಖಾತ್ರಿಪಡಿಸಲು ಬಳಸಲಾಗುತ್ತದೆ.

**4.15**

ಅಂತಿಮ ಸಂಶೋಧನಾ ದಾಖಲೆಗಳು ಭಾಗವಹಿಸುವವರನ್ನು ನೇರವಾಗಿ ಅಥವಾ ಪರೋಕ್ಷವಾಗಿ ಗುರುತಿಸುವುದಿಲ್ಲ (ಉದಾಹರಣೆಗೆ: ಭಾಗವಹಿಸುವವರನ್ನು ಅವರ ಸ್ಥಳ ಜನಾಂಗದ ಅಂಶಗಳನ್ನು ಗುರುತಿಸುವ ಮೂಲಕ ವಿವರಿಸುವುದಿಲ್ಲ). ಭಾಗವಹಿಸುವವರ ಗುರುತು ಸಿಗದಿರುವುದನ್ನು ಖಾತ್ರಿಪಡಿಸಲು ಅಂತಿಮ ಕರಡುಗಳನ್ನು ಪುನರ್‌ಮನನ ಮಾಡಿ, ಪರಿಷ್ಕರಿಸಬೇಕು.

## 5. ನಿಂದನೆ ಹಾಗೂ ಶೋಷಣೆಯ ಅನುಮಾನಗಳು ಹಾಗೂ ಬಹಿರಂಗಗಳು

ಮಕ್ಕಳನ್ನು ಒಳಗೊಂಡ ಲೈಂಗಿಕ ಶೋಷಣೆಯ ಸಂಶೋಧನೆಯನ್ನು ನಡೆಸುವಾಗ ಉದ್ಭವಿಸಬಹುದಾದಂತಹ ಪ್ರಮುಖ ಅಪಾಯವೇನೆಂದರೆ ಮಕ್ಕಳು ತಮ್ಮ ಹಿಂದಿನ ಅಥವಾ ಈಗಿನ ತೊಂದರೆಯನ್ನು ಬಹಿರಂಗಪಡಿಸಬಹುದು ಅಥವಾ ಅವರು ನೀಡುವಂತಹ ಉತ್ತರಗಳು ಅವರು ತೊಂದರೆಯನ್ನು ಎದುರುಸಿರುವುದನ್ನು ಸೂಚಿಸುತ್ತದೆ. ನೀವು ಇಂತಹ ಸನ್ನಿವೇಶದಲ್ಲಿ ಏನು ಮಾಡುವಿರಿ ಎಂದು ಆಲೋಚಿಸಿರಬೇಕು.

'ಮಗುವಿನ ಅತ್ಯುತ್ತಮ ಹಿತಾಸಕ್ತಿ'ಯ ತತ್ವವನ್ನು ಅನುಸರಿಸುವಾಗ (ಮಾರ್ಗದರ್ಶಕ ತತ್ವಗಳನ್ನು ನೋಡಿ) ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿ ಮಾಡಿಕೊಳ್ಳಬೇಕು. 'ಮಗುವಿನ ಅತ್ಯುತ್ತಮ ಹಿತಾಸಕ್ತಿಗಳ' ತತ್ವ ವರದಿಗಾರಿಕೆಯ ಅಗತ್ಯ, ಸಂತ್ರಸ್ತರಿಗೆ ದುರ್ಬಲ 'ಮಾನವ' ಹಾಗೂ 'ಸಾಮಾಜಿಕ' ಪರಿಣಾಮಗಳೊಂದಿಗೆ ಕೇವಲ ಅಧಿಕಾರಶಾಹಿ ಪ್ರಕ್ರಿಯೆ ಆದಾಗ ಮಾತ್ರ ಉದ್ಭವಿಸಬಹುದು. ಸೀಮಿತ ಅಥವಾ ಕಳಪೆ ಬೆಂಬಲ ಪ್ರತಿಕ್ರಿಯೆ ಅಥವಾ ಅಧಿಕಾರಿಗಳು ನಿಂದನೆಯೊಂದಿಗೆ ಸಹಭಾಗಿತ್ವವನ್ನು ಹೊಂದಿದ್ದು, ಒಳ್ಳೆಯದ್ದಕ್ಕಿಂತ ಹೆಚ್ಚು ತೊಂದರೆಯನ್ನು ಉಂಟು ಮಾಡುವ ಸಾಧ್ಯತೆಗಳಿದ್ದಾಗ, ಅಧಿಕಾರಿಗಳಿಗೆ ವರದಿ ಮಾಡುವುದರಿಂದ ಮಗುವಿನ ಮೇಲೆ ಸಂಭವಿಸಬಹುದಾದಂತಹ ತೊಂದರೆಯನ್ನು ನೀವು ಪರಿಗಣಿಸಬೇಕು.

ಕೆಲವು ಸನ್ನಿವೇಶಗಳಲ್ಲಿ ವರದಿಗಾರಿಕೆ ಕಾನೂನಿನ ಪ್ರಕಾರ ಅಗತ್ಯ (ಕಡ್ಡಾಯ ವರದಿಗಾರಿಕೆ). ಇಂತಹ ಸಂದರ್ಭದಲ್ಲಿ ನಿಮ್ಮ ಸಂಶೋಧನೆಯ ವಿನ್ಯಾಸದಲ್ಲಿ ಈ ಅಂಶವನ್ನು ಪರಿಗಣಿಸಿರಬೇಕು. ಉದಾಹರಣೆಗೆ, ನೀವು ವರದಿ ಮಾಡಬೇಕಾದರೆ, ಮಕ್ಕಳು ಸೀಮಿತ ಅಥವಾ ಯಾವುದೇ

# ನೈತಿಕ ಕಾರ್ಯಗಳು

**5.1** ಪ್ರತಿಕ್ರಿಯಿಸುವ ಸಾಮರ್ಥ್ಯವಿರುವಂತಹ ಬೆಂಬಲ ಸೇವೆಗಳಿಗಾಗಿ ಮಕ್ಕಳನ್ನು ಉಲ್ಲೇಖಿಸಲು ಸ್ಪಷ್ಟವಾದ ವಿಧಾನವನ್ನು ಸ್ಥಾಪಿಸಲಾಗಿದೆ.

**5.2** ದತ್ತಾಂಶ ಸಂಗ್ರಹಿಸುವ ಸಿಬ್ಬಂದಿಗಳಿಗೆ ಅಪಾಯಗಳನ್ನು ಹಾಗೂ ನಿಂದನೆಯ ಸೂಚಕಗಳನ್ನು ಗುರುತಿಸಲು ತರಬೇತಿ ನೀಡಲಾಗಿದೆ ಹಾಗೂ ಅವರಿಗೆ ಆಘಾತ-ಮಾಹಿತಿ, ಮಗು-ಕೇಂದ್ರಿತ ದೃಷ್ಟಿಕೋನಗಳನ್ನು ಬಳಸಿಕೊಂಡು ಬಹಿರಂಗಗೊಳಿಸುವಿಕೆಗಳಿಗೆ ಸೂಕ್ತವಾಗಿ ಪ್ರತಿಕ್ರಿಯೆ ನೀಡುವ ಕೌಶಲ್ಯಗಳನ್ನು ಹೊಂದಿದ್ದಾರೆ, ಹಾಗೂ ಕೂಡಲೇ ಬೆಂಬಲ ಸೇವೆಗಳಿಗೆ ಉಲ್ಲೇಖಿಸುವ ಕುರಿತು ಅರಿವನ್ನು ಹೊಂದಿದ್ದಾರೆ.

**5.3** ಭಾಗವಹಿಸುವ ಎಲ್ಲರಿಗೂ ಸಂಕ್ಷಿಪ್ತವಾಗಿ ವಿವರಿಸಲು ಹಾಗೂ ಅವರಿಗೆ ಯಾವುದಾದರೂ ವಿಷಯ/ತೊಂದರೆಯನ್ನು ಹೇಳಲು ಅನುಮತಿಸುವಂತಹ ಪ್ರಕ್ರಿಯೆಯನ್ನು ಸೃಷ್ಟಿಸಲಾಗಿದೆ.

**5.4** ಎಲ್ಲಾ ದತ್ತಾಂಶ ಸಂಗ್ರಹಿಸುವವರಿಗೂ ಸಂಕ್ಷಿಪ್ತವಾಗಿ ವಿವರಿಸುವ ಪ್ರಕ್ರಿಯೆಯನ್ನು ಸೃಷ್ಟಿಸಲಾಗಿದೆ.

**5.5** ತಿಳಿವಳಿಕೆಯುಳ್ಳ ಸಮ್ಮತಿ ಮಾಹಿತಿಯು, ಮಕ್ಕಳು ಹಾಗೂ ಪೋಷಕರು/ಪಾಲಕರಿಗೆ ಮಾಹಿತಿ ಬಹಿರಂಗಪಡಿಸುವುದರಿಂದ ಯಾವ ವಿಧಾನವನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆ.

**5.6** ತಿಳಿವಳಿಕೆಯುಳ್ಳ ಸಮ್ಮತಿ ಮಾಹಿತಿಯು, ಬಹಿರಂಗಗೊಳಿಸಿದ ಹಿನ್ನೆಲೆಯಲ್ಲಿ ಅನುಸರಿಸಲಾಗುವಂತಹ ಯಾವುದೇ ಕಾನೂನಾತ್ಮಕವಾಗಿ ಅಗತ್ಯವಿರುವಂತಹ ಔಪಚಾರಿಕ ವರದಿಗಾರಿಕೆ ವಿಧಾನಗಳ ವಿವರಗಳನ್ನು ಒಳಗೊಂಡಿದೆ.

**5.7** ರಾಷ್ಟ್ರಮಟ್ಟದಲ್ಲಿ ಕಡ್ಡಾಯ ವರದಿಗಾರಿಕೆಗೆ ಸಂಬಂಧಪಟ್ಟಂತೆ ಕಾನೂನಿನ ಅಗತ್ಯಗಳಿದ್ದಲ್ಲಿ ಎಲ್ಲಾ ಸಂಶೋಧನಾ ಸಿಬ್ಬಂದಿಗಳೂ ಆ ಅಗತ್ಯಗಳ ಬಗ್ಗೆ ತಿಳಿದುಕೊಂಡಿರಬೇಕು.

ಬೆಂಬಲವಿಲ್ಲದೆ ಹೆಚ್ಚು ದೌರ್ಜನ್ಯಕ್ಕೆ ಒಳಗಾಗುವಂತಿದ್ದರೆ, ಇಂತಹ ಸನ್ನಿವೇಶದಲ್ಲಿ ನಿಮ್ಮ ಸಂಶೋಧನೆಯಲ್ಲಿ ಭಾಗವಹಿಸುವುದರಿಂದ ಒಳಿತಿಗಿಂತ ಹೆಚ್ಚು ಕೆಡುಕು ಉಂಟಾಗುವ ಸಾಧ್ಯತೆ ಇರುವುದರ ಕುರಿತು ಆಲೋಚಿಸಿ. ಒಂದು ವೇಳೆ ಮಗುವನ್ನು ಅಪಾಯಕಾರಿ ಸನ್ನಿವೇಶದಿಂದ ಹೊರಗೆ ಎಳೆಯುವ ಸಾಧ್ಯತೆ ಇಲ್ಲದಿದ್ದಲ್ಲಿ ನಿಮ್ಮ ಸಂಶೋಧನೆಯು ಇದನ್ನು ಪರಿಗಣಿಸಬೇಕು. ಉದಾಹರಣೆಗೆ, ವಿಧಾನಗಳು, ಅನುಭವಗಳಿಗೆ ಸಂಬಂಧಪಟ್ಟಂತಹ ನೇರವಾದ ಪ್ರಶ್ನೆಗಳಿಗಿಂತ ಸಾಮಾಜಿಕ ನಿಯಮಗಳಾದ ನಡವಳಿಕೆಗಳು ಹಾಗೂ ಗ್ರಹಿಕೆಗಳ ಮೇಲೆ ಗಮನ ಕೇಂದ್ರೀಕರಿಸಿರುವ ಪರೋಕ್ಷವಾದ ಪ್ರಶ್ನೆಗಳನ್ನು ಕೇಳಬಹುದು, ಜೊತೆಗೆ ಮಗು ಹಾಗೂ ಪೋಷಕರು/ಪಾಲಕರಿಗೆ ಅವರು ನೀಡುವಂತಹ ಮಾಹಿತಿಯಿಂದ ಸಂಭವಿಸಬಹುದಾದಂತಹ ಅಪಾಯಗಳೇನು, ಇದರ ಹೊರತಾಗಿಯೂ ಮಾಹಿತಿಯನ್ನು ನೇರವಾಗಿ ಬಹಿರಂಗಗೊಳಿಸಲು ಬಯಸುವರೇ ಎಂಬ ವಿಷಯಗಳನ್ನು ವಿಧಾನಗಳು ಕೇಳುವಂತಿರಬೇಕು.

ಪರೋಕ್ಷವಾದ ದೃಷ್ಟಿಕೋನದೊಂದಿಗೂ ಸಹ ನಿಮ್ಮ ಸಂಶೋಧನಾ ಯೋಜನೆಯು, ಭಾಗವಹಿಸುವವರಿಗೆ ಅವರು ನೇರವಾಗಿ ಬಹಿರಂಗಗೊಳಿಸದಿದ್ದರೂ ಸಹ, ಸೂಕ್ತ ಸೇವೆಗಳಿಂದ ಅವರಿಗೆ ಬೆಂಬಲ ಲಭ್ಯವಾಗುವುದನ್ನು ಖಾತ್ರಿಪಡಿಸುತ್ತದೆ. ಮಕ್ಕಳನ್ನು ಒಳಗೊಂಡ ಲೈಂಗಿಕ ಶೋಷಣೆಯ ಎಲ್ಲಾ ಸಂಶೋಧನಾ ಯೋಜನೆಗಳಿಗೂ ಸಹ, ಅಗತ್ಯವಿರುವ ಕಡೆ ಅನೌಪಚಾರಿಕ ಪ್ರತಿಕ್ರಿಯೆಗಳು ಹಾಗೂ ಔಪಚಾರಿಕ ವರದಿಗಾರಿಕೆಗಾಗಿ ಸ್ಪಷ್ಟವಾದ ವಿಧಾನಗಳ ಅಗತ್ಯವಿದೆ.

**5.8**

ಭಾಗವಹಿಸುವ ಮಕ್ಕಳ ಪೈಕಿ ತೊಂದರೆಯ ಅಪಾಯದಲ್ಲಿರುವಂತಹ ಮಗುವನ್ನು ಗುರುತಿಸುವಂತಹ 'ರೆಡ್ ಫ್ಲ್ಯಾಗ್' ಎಚ್ಚರಿಕೆ ವ್ಯವಸ್ಥೆಯನ್ನು ಸೃಷ್ಟಿಸಲಾಗಿದೆ.

**5.9**

ದತ್ತಾಂಶ ಸಂಗ್ರಹಿಸುವವರು ಒಳಗೊಂಡಂತೆ ಸಂಶೋಧನಾ ತಂಡಗಳು ಮಕ್ಕಳ ಅಭಿವೃದ್ಧಿ ಹಾಗೂ ಆಘಾತ-ಮಾಹಿತಿಪೂರ್ವಕ ಅಭ್ಯಾಸದ ಬಗ್ಗೆ ಅರಿವನ್ನು ಹೊಂದಿದ್ದಾರೆ ಹಾಗೂ ಅಮೌಖಿಕ ನಡವಳಿಕೆಗಳು ಒಳಗೊಂಡಂತೆ ಒತ್ತಡದ ಪ್ರತಿಕ್ರಿಯೆಗಳನ್ನು ಗುರುತಿಸಬಲ್ಲವರಾಗಿದ್ದಾರೆ, ಆಘಾತ ಉಂಟಾಗುವುದನ್ನು ತಡೆಗಟ್ಟಲು ಸಂಶೋಧನಾ ಚಟುವಟಿಕೆಗಳನ್ನು ಯಾವಾಗ ನಿಲ್ಲಿಸಬೇಕು ಎಂದು ಗುರುತಿಸುವ ಸಾಮರ್ಥ್ಯವುಳ್ಳವರಾಗಿದ್ದಾರೆ.

**5.10**

ಭಾಗವಹಿಸುವವರ ಅನುಮತಿಯಿಲ್ಲದೆ ಶೋಷಣೆ ಅಥವಾ ನಿಂದನೆಯ ವಿಷಯಗಳನ್ನು ಬಹಿರಂಗಪಡಿಸದಿರುವಂತಹ ನಿರ್ಧಾರವನ್ನು ಕೈಗೊಂಡಲ್ಲಿ, ಕಡ್ಡಾಯ ವರದಿಗಾರಿಕೆಯ ಯಾವುದೇ ಕಾನೂನು ಅಗತ್ಯಗಳಿಂದ ಅಧಿಕೃತ ವಿನಾಯಿತಿಯ ಅನುಮತಿಯನ್ನು ಪಡೆದುಕೊಳ್ಳಬೇಕು.

**5.11**

ನೇರವಾಗಿ ಬಹಿರಂಗಪಡಿಸದಿದ್ದರೂ ಸಹ ಭಾಗವಹಿಸುವವರಿಗೆ ಉಲ್ಲೇಖ ವಿವರಗಳನ್ನು ಒದಗಿಸಲಾಗುವುದು (ಇದರಿಂದ ಮಕ್ಕಳು ಬಲವಂತವಾಗಿ ನಿರ್ದಿಷ್ಟವಾಗಿ ಮಾಹಿತಿಯನ್ನು ಕೋರುವಂತಿರುವುದಿಲ್ಲ). ಈ ಮಾಹಿತಿಯನ್ನು ಮಗುವಿಗೆ ಇತರೆ ಮಾಹಿತಿಗಳ ಜೊತೆಗೆ ಒದಗಿಸಬೇಕು ಹಾಗೂ ಆ ಪ್ರಕಾರವಾಗಿ ಮಗು ಆ ಮಾಹಿತಿಯನ್ನು ಹೊಂದಿದ್ದಲ್ಲಿ ಯಾವುದೇ ಅಪಾಯವನ್ನು ಎದುರಿಸದಿರುವಂತಿರಬೇಕು.

**5.12**

ಸಂಶೋಧನೆಯನ್ನು ಅನಾಮಧೇಯರು ಭಾಗವಹಿಸಲು ಅನುಮತಿಸುವಂತೆ ವಿನ್ಯಾಸಪಡಿಸಿದ್ದಲ್ಲಿ, ತುರ್ತು ಗಮನ ನೀಡಬೇಕಾದ ಅಗತ್ಯವಿರುವಂತಹ ಬಹಿರಂಗಗೊಳಿಸುವಿಕೆಗಳನ್ನು ನಿರ್ವಹಿಸುವಂತಹ ವಿಧಾನಗಳು ಇರಬೇಕು.

## 6. ಪಾವತಿ ಹಾಗೂ ಪರಿಹಾರ

ಸಂಭಾವನೆ, ಹಣದ ರೂಪದಲ್ಲಾಗಲಿ ಅಥವಾ ಮತ್ತ್ಯಾವುದಾದರೂ ರೂಪದಲ್ಲಾಗಲಿ, ಮಕ್ಕಳೊಂದಿಗೆ ಸಂಶೋಧನೆಯನ್ನು ನಡೆಸುವಾಗ ಅದನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು. ಸಂಶೋಧನೆಯಲ್ಲಿ ಭಾಗವಹಿಸುವವರಿಗೆ ಅವರು ಓಡಾಡಲು ತಗಲುವಂತಹ ಸಾರಿಗೆ ವೆಚ್ಚಗಳು ಸೇರಿದಂತೆ ಮತ್ತ್ಯಾವುದಾದರೂ ವೆಚ್ಚಗಳಿದ್ದಲ್ಲಿ ಅದನ್ನು ಪಾವತಿಸಬೇಕು. ಜೊತೆಗೆ ಅವರಿಗೆ ಆಹಾರ ಮತ್ತು ಪಾನೀಯಗಳ ವ್ಯವಸ್ಥೆಯನ್ನೂ ಕಲ್ಪಿಸಬೇಕು. ಸಾಮಾನ್ಯವಾಗಿ ಸಂಶೋಧನೆಯಲ್ಲಿ ಭಾಗವಹಿಸುವವರಿಗೆ ಅವರು ನೀಡಿದ ಸಮಯಕ್ಕಾಗಿ ಪಾವತಿಯನ್ನು ನೀಡುವುದನ್ನು ಪ್ರೋತ್ಸಾಹಿಸಬಾರದು, ಏಕೆಂದರೆ ಅದನ್ನು ಸಂಶೋಧನೆಗಾಗಿ ಪಾವತಿ ಎಂದು ಪರಿಗಣಿಸಬಹುದು ಹಾಗಾಗಿ ಆಸಕ್ತಿಯ ಸಂಘರ್ಷ ಉಂಟಾಗಬಹುದು. ಕೆಲವು ಪ್ರಕರಣಗಳಲ್ಲಿ ಸಣ್ಣ ದುಬಾರಿಯಲ್ಲದ ಉಡುಗೊರೆಗಳು (ಶೌಚಾಲಯದಲ್ಲಿ ಬಳಸುವಂತಹ ಸಾಮಗ್ರಿಗಳು) ಉತ್ತೇಜನಾ ರೂಪದ ಪ್ರೋತ್ಸಾಹಕವನ್ನಾಗಿ ನೀಡಬಹುದು.

# ನೈತಿಕ ಕಾರ್ಯಗಳು

**6.1** ಭಾಗವಹಿಸುವವರಿಗೆ ಪರಿಹಾರವನ್ನು ಒದಗಿಸುವುದು ಸೂಕ್ತವೇ ಎಂದೂ ಪರಿಗಣಿಸಿ.

**6.2** ಉತ್ತಮ ಕಾರಣ ಇರದ ಹೊರತು 'ಪ್ರೋತ್ಸಾಹಕ ಪಾವತಿ'ಗಳನ್ನು ಬಳಸುವುದನ್ನು ತಪ್ಪಿಸಿ.

**6.3** ನಿರ್ಧಾರ ಮಾಡುವಾಗ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭವನ್ನೂ ಗಣನೆಗೆ ತೆಗೆದುಕೊಳ್ಳಿ ಹಾಗೂ ಅಪೇಕ್ಷಿತ ಪರಿಹಾರದ ಕುರಿತು ಸಂಬಂಧಪಟ್ಟ ತಜ್ಞರು/ ಬದುಕುಳಿದಿರುವವರೊಂದಿಗೂ ಸೂಕ್ತವಾಗಿ ಸಮಾಲೋಚಿಸಿ.

**6.4** ಯಾವುದೇ ಪಾವತಿಯ ರೂಪವನ್ನು ಪೂರ್ವನಿರ್ಧರಿಸಿ (ಉದಾಹರಣೆಗೆ ಉಡುಗೊರೆ ಕಾರ್ಡ್‌ಗಳು, ಆಹಾರ, ಒಂದು ಉಡುಗೊರೆ, ಶೈಕ್ಷಣಿಕ ಸಾಮಗ್ರಿಗಳು) ಹಾಗೂ ಅದನ್ನು ಯಾರು ಪಡೆಯುತ್ತಾರೆ – ಮಗು, ಪೋಷಕರು, ಪಾಲಕರು, ಸಮುದಾಯ.

**6.5** ಪಾವತಿಗೆ ಸಂಬಂಧಪಟ್ಟಂತಹ ಮಾಹಿತಿಯನ್ನು ಯಾವ ರೀತಿ ಬಹಿರಂಗಗೊಳಿಸಲಾಗುವುದು ಎಂಬುದನ್ನು ಆಲೋಚಿಸಿ (ಸಮ್ಮತಿ ಪ್ರಕ್ರಿಯೆಯಲ್ಲಿ, ಭಾಗವಹಿಸಲು ಮಕ್ಕಳು ಒಪ್ಪಿಗೆ ನೀಡಿದ ನಂತರ ಅಥವಾ ಸಂಶೋಧನೆಯ ಅಂತ್ಯದಲ್ಲಿ)

ನಿಮ್ಮ ಸಂಶೋಧನಾ ಯೋಜನೆಯು ಸಾರಿಗೆ, ವಸತಿ, ಆಹಾರ, ಅನುವಾದಕರು, ಸೂಕ್ತ ಮಗು-ಸ್ನೇಹಿ ಸ್ಥಳಗಳು, ಮಕ್ಕಳೊಂದಿಗೆ ಸೂಕ್ತವಾದ ರೀತಿಯಲ್ಲಿ ಸಂವಹನ ನಡೆಸುವ ಸಾಮಗ್ರಿಗಳು (ಉದಾಹರಣೆಗೆ: ಆಟದ ಚಿಕಿತ್ಸಾ ಕಿಟ್‌ಗಳು), ಸಿಬ್ಬಂದಿ ಸಮಯ ಹಾಗೂ ಹೊರಗಿನ ತಜ್ಞರ ಸೇವೆಗಳನ್ನು ಪಡೆದುಕೊಳ್ಳುವುದು, ಇಂತಹ ಮಕ್ಕಳನ್ನು ಒಳಗೊಂಡಂತಹ ವೆಚ್ಚಗಳ ಆಯವ್ಯಯವನ್ನು ಹೊಂದಿರಬೇಕು.

ಭಾಗವಹಿಸುವಿಕೆ, ಸ್ಥಳೀಯ ತಜ್ಞರೊಂದಿಗೆ ಸಮಾಲೋಚನೆಗೆ ಸಂಬಂಧಪಟ್ಟ ಪಾವತಿಗಳಲ್ಲಿ ಸಮರ್ಪಕತೆಯನ್ನು ಖಾತ್ರಿಪಡಿಸಬೇಕು. ಪರಿಹಾರ ಪರಿಗಣನೆಗಳು, ಪಾವತಿಯು ಭಾಗವಹಿಸುವವರು ಹಾಗೂ ಹೊರಗಿರುವವರ ನಡುವೆ ಹಿಂಸೆ ಅಥವಾ ಸಂಘರ್ಷವನ್ನು ಉಂಟು ಮಾಡಬಾರದು, ಆದಾಯ ನಷ್ಟದಲ್ಲಿ ಮಧ್ಯಸ್ಥಿಕೆ ಮಾಡುವಂತಿರಬಾರದು, ಹಾಗೂ ಭಾಗವಹಿಸುವವರಿಗೆ ಭಾಗವಹಿಸಲು ಪ್ರೋತ್ಸಾಹಿಸುವಂತಿರಬಾರದು, ಅಥವಾ ತಪ್ಪು ವಿವರಗಳನ್ನು ಒದಗಿಸಲು ಅನುವಾಗುವಂತೆ ಇರಬಾರದು.

**6.6** ಪಾವತಿಗಳು ಭಾಗವಹಿಸುವ ನಿರ್ಧಾರದ ಮೇಲೆ ಅನಗತ್ಯವಾಗಿ ಪ್ರಭಾವ ಬೀರುವುದಿಲ್ಲ.

**6.7** ಸಂಶೋಧನೆಯಲ್ಲಿ ಭಾಗವಹಿಸುವಿಕೆ ಎಂದರೆ ಆದಾಯ ನಷ್ಟ ಎಂಬ ಅರ್ಥವಲ್ಲ ಅಥವಾ ಮಗು ಶಿಕ್ಷಣ, ಇತ್ಯಾದಿಯಂತಹ ಮುಖ್ಯವಾದ ದೈನಂದಿನ ಚಟುವಟಿಕೆಗಳನ್ನು ತಪ್ಪಿಸಿಕೊಳ್ಳುವಂತಾಗುತ್ತದೆ ಎಂಬ ಅರ್ಥವೂ ಅಲ್ಲ.

**6.8** ಮಕ್ಕಳನ್ನು ಒಳಗೊಂಡ ವೆಚ್ಚಗಳನ್ನು ಪರಿಗಣಿಸಬೇಕು (ಉದಾಹರಣೆಗೆ: ಸಾರಿಗೆ, ವಸತಿ, ಆಹಾರ, ಅನುವಾದಕರು, ಸ್ಥಳ, ಮಕ್ಕಳೊಂದಿಗೆ ಸಂವಹನೆಗಾಗಿ ಸಾಮಗ್ರಿಗಳು, ಇತ್ಯಾದಿ).

* ಸಂಶೋಧನೆಯಲ್ಲಿ ಮಕ್ಕಳು ಭಾಗವಹಿಸುವುದನ್ನು ಪ್ರೋತ್ಸಾಹಿಸಲು ಪ್ರೋತ್ಸಾಹಕ ಪಾವತಿಗಳನ್ನು ಸೇರಿಸಲಾಗಿದೆ. ಇದು ನಗದು ಪಾವತಿಗಳಾಗಿರಬೇಕು ಅಥವಾ ವೋಚರ್‌ಗಳಂತಹ ಪರ್ಯಾಯಗಳಾಗಿರಬಹುದು. ಸಂಶೋಧನೆಯಲ್ಲಿ ಭಾಗವಹಿಸಲು ಮನವೊಲಿಸುವುದು ವಿವಾದಾಸ್ಪದ.

See Graham, A., Powell, M., Taylor, N., Anderson, D. & Fitzgerald, R. (2013). *Ethical Research Involving Children*. Florence: UNICEF Office of Research – Innocenti; p.89.

## 7. ಹಿತಾಸಕ್ತಿಯ ಸಂಘರ್ಷಗಳು

ಯಾವುದಾದರೂ ಸಂಶೋಧನೆಯನ್ನು ಕೈಗೊಳ್ಳುವಾಗ ಆಸಕ್ತಿಗಳ ಸಂಭವನೀಯ ಸಂಘರ್ಷಗಳಿರಬಹುದು, ಇದು ಸಂಶೋಧನೆಯ ಫಲಿತಾಂಶಗಳ ಮೇಲೆ ಪ್ರಭಾವ ಬೀರಬಹುದು ಅಥವಾ ತಪ್ಪು ವ್ಯಾಖ್ಯಾನವನ್ನೂ ನೀಡಬಹುದು. ಬಹಳ ಸಾಮಾನ್ಯ ಆಸಕ್ತಿ ಸಂಘರ್ಷಗಳೆಂದರೆ ಹಣಕಾಸಿನ ಸಂಘರ್ಷಗಳು. ಇದು ಸಂಶೋಧನೆ ಯೋಜಿಸುವಂತಹ ಅಂಶಗಳಾಗಿರಬಹುದು, ಏಕೆಂದರೆ ನಿರ್ದಿಷ್ಟವಾದ ದಾನಿ ಕೋರಿಕೆಗಳಿಂದಾಗಿ ಅಥವಾ ನಿಧಿ ಬೆಂಬಲಿತ ಕಾರ್ಯಕ್ರಮಗಳೊಂದಿಗಿನ ಫಲಿತಾಂಶಗಳನ್ನು ಅನುಸರಿಸಲು ಸಂಭವನೀಯ ದಾನಿ ಬೆಂಬಲವಾಗಿರಬಹುದು.

# ನೈತಿಕ ಕಾರ್ಯಗಳು

**7.1** ಯಾವುದೇ ಸಂಭವನೀಯ ಆಸಕ್ತಿಗಳನ್ನು ಗುರುತಿಸಲಾಗಿದೆ ಹಾಗೂ ಅದನ್ನು ನಿಮ್ಮ ಸಂಶೋಧನೆಯ ವಿನ್ಯಾಸದಲ್ಲಿ ವಿವರಿಸಲಾಗಿದೆ ಮತ್ತು ಅದನ್ನು ನಿರ್ವಹಿಸಲು ಒಪ್ಪಿಕೊಂಡಿರುವ ಪ್ರಕ್ರಿಯೆ ಇದೆ.

**7.2** ಸಂಶೋಧಕರಿಗೆ ತಾವು ತಾರತಮ್ಯತೆಯನ್ನು ಉಂಟು ಮಾಡುತ್ತೇವೆ ಅಥವಾ ಅಧ್ಯಯನದ ವಿಷಯದೊಂದಿಗೆ ನೇರವಾಗಿ ವಿರುದ್ಧವಾಗಿದ್ದೇವೆ ಎಂಬ ವ್ಯಕ್ತಿಗತ ನಂಬಿಕೆಗಳಿಲ್ಲ.

**7.3** ದಾನಿಗಳು ಸಂಶೋಧನಾ ವಿನ್ಯಾಸಕ್ಕೆ ಒಳಮಾಹಿತಿಯನ್ನು ಒದಗಿಸಿರಬಹುದು, ಆದರೆ ಅವರು ದತ್ತಾಂಶ ವಿಶ್ಲೇಷಣೆಯಲ್ಲಿ ಒಳಗೊಂಡಿಲ್ಲ.

ವೃತ್ತಿ ಪ್ರಗತಿ, ಸಹೋದ್ಯೋಗಿಗಳು ಅಥವಾ ಸ್ನೇಹಿತರು ಅಥವಾ ಸಂಶೋಧಕರ ಸ್ಥಾನದಿಂದ ಉದ್ಭವಿಸಬಹುದಾದಂತಹ ಸ್ಪರ್ಧಾತ್ಮಕ ಇತರೆ ಆಸಕ್ತಿಗಳಿಂದಲೂ ಸಂಘರ್ಷಗಳು ಉಂಟಾಗಬಹುದು. (ಸ್ಥಾನ ಎಂದರೆ ನಮ್ಮನ್ನು ವೈಯಕ್ತಿಕವಾಗಿ ನಿರ್ಧಿಷ್ಟವಾದ ರೀತಿಯಲ್ಲಿ ಫಲಿತಾಂಶಗಳನ್ನು ವ್ಯಾಖ್ಯಾನಿಸಲು ತಳ್ಳುವಂತಹ ಸಾಮಾಜಿಕ ಅಥವಾ ರಾಜಕೀಯ ಪ್ರಭಾವಗಳು).

ಸಂಶೋಧಕರು ಯಾವಾಗಲೂ ಸ್ಥಾನ ಅಥವಾ ಅಧಿಕಾರ ಸಂಬಂಧಗಳ ಕುರಿತು ಕಾಳಜಿಯನ್ನು ಹೊಂದಿರಬೇಕು. ನಿಮಗೆ ಇವುಗಳ ಕುರಿತು ಅರಿವಿರುವುದನ್ನು ಖಾತ್ರಿಪಡಿಸಿಕೊಳ್ಳಲು ಹಾಗೂ ಭಾಗವಹಿಸುವವರ ಧ್ವನಿಗಳನ್ನು ವಿರೂಪಗೊಳಿಸುವ ಪ್ರಭಾವವನ್ನು ತಗ್ಗಿಸಲು ಇತರೆ ತಜ್ಞರೊಂದಿಗೆ ಸಮಾಲೋಚಿಸಿ.

7.4

ಸಂಭವನೀಯ ಆಸಕ್ತಿಯ ಸಂಘರ್ಷಗಳ ವಿರುದ್ಧ ಎಚ್ಚರಿಕೆ ವಹಿಸಲು ಮೂರನೇ ಪಾರ್ಟಿ ಪುನರ್‌ಮನನ ಪ್ರಕ್ರಿಯೆಯನ್ನು ಸೃಷ್ಟಿಸಲಾಗಿದೆ.

7.5

ಎಲ್ಲಾ ಸಂಶೋಧನಾ ಫಲಿತಾಂಶಗಳನ್ನೂ ನಿಖರವಾಗಿ ಹಾಗೂ ಪ್ರಾಮಾಣಿಕವಾಗಿ ವರದಿ ಮಾಡಲಾಗುತ್ತದೆ (ಕೃತಿಚೌರ್ಯ, ಆವಿಷ್ಕಾರಗಳು, ಫಲಿತಾಂಶ ಸರಿಹೊಂದಿಸುವಿಕೆ, ತಾರತಮ್ಯತೆ ಇಲ್ಲ)

# ಕ್ರಮ 3: ತೊಂದರೆಗಳು ಹಾಗೂ ಪ್ರಯೋಜನಗಳ ವಿಶ್ಲೇಷಣೆ

ಈಗ ನೀವು ನೈತಿಕ ಕಾರ್ಯಗಳನ್ನು ಪರಿಗಣಿಸಿರುವುದರಿಂದಾಗಿ ನಿಮ್ಮ ಸಂಶೋಧನೆಯ ಎಲ್ಲಾ ಸಂಭವನೀಯ ಸಕಾರಾತ್ಮಕ ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಗುರುತಿಸುವ ಹಾಗೂ ಅಂದಾಜಿಸುವ ಔಪಚಾರಿಕ ಪ್ರಕ್ರಿಯೆಯನ್ನು ಅನುಸರಿಸಿ. ಇದು, ನೀವು ಆಲೋಚಿಸುವಂತಹ ಎಲ್ಲಾ ಪ್ರಯೋಜನಗಳು ಹಾಗೂ ಎಲ್ಲಾ ಸಾಧ್ಯವಿರುವ ತೊಂದರೆಗಳ ಬ್ರೇನ್‌ಸ್ಟಾರ್ಮಿಂಗ್ ಅನ್ನು ಒಳಗೊಂಡಿದೆ. ಇದಾದ ನಂತರ ತೊಂದರೆಗಳ ಹೋಲಿಕೆಯಲ್ಲಿ ಲಾಭಗಳನ್ನು ಒಟ್ಟುಗೂಡಿಸಿ.

ಅ) ಕೋಷ್ಟಕವನ್ನು ಬಳಸಿಕೊಂಡು ನಿಮ್ಮ ಸಂಶೋಧನೆಯ ಎಲ್ಲಾ ಸಂಭವನೀಯ ತೊಂದರೆಗಳು ಹಾಗೂ ಪ್ರಯೋಜನಗಳ ಪಟ್ಟಿ ಮಾಡಿ

ಆ) ಪ್ರಯೋಜನಗಳನ್ನು ವೃದ್ಧಿಸಲು ಹಾಗೂ ತೊಂದರೆಗಳನ್ನು ಕಡಿಮೆಗೊಳಿಸಲು ಕಾರ್ಯತಂತ್ರಗಳನ್ನು ಸೇರಿಸಿಕೊಳ್ಳಿ

ಇ) ನಿಮ್ಮ ಕಾರ್ಯತಂತ್ರಗಳು ತೊಂದರೆಗಳನ್ನು ಬಗೆಹರಿಸುವ ಸಾಧ್ಯತೆಯ ಪ್ರಮಾಣವನ್ನು ವಿವರಿಸಿ (ಸಂಪೂರ್ಣವಾಗಿ, ಭಾಗಶಃ, ಸೀಮಿತವಾಗಿ)

ಈ) ಕೋಷ್ಟಕವನ್ನು ಟ್ಯಾಲಿ ಮಾಡಿ:

- ನಿಮಗೆ ಸಕಾರಾತ್ಮಕ ಅಂಕಗಳು ಬಂದರೆ, ಹಾಗೂ ನೀವು ಪಟ್ಟಿ ಮಾಡಿದಂತಹ ತೊಂದರೆಗಳು ಚಿಕ್ಕದಾಗಿದ್ದರೆ, ಮುಂದುವರೆಸಿ.
- ಒಂದು ವೇಳೆ ನಿಮಗೆ ನಕಾರಾತ್ಮಕ ಅಂಕಗಳು ಹಾಗೂ ಸಾಧಾರಣ ಪ್ರಮುಖ ತೊಂದರೆಗಳು ಬಂದರೆ, ಬದಲಾವಣೆ ಮಾಡುವ ಸಾಧ್ಯತೆಗಳ ಬಗ್ಗೆ ಆಲೋಚಿಸಿ ಅಥವಾ ಸಂಶೋಧನೆಯನ್ನು ಮುಂದುವರೆಸಬೇಡಿ.

# ಕ್ರಮ 4: ಮೂರನೇ ಪಾರ್ಟಿ ಪುನರ್‌ಮನನ

ಸೈದ್ಧಾಂತಿಕ ಮಾರ್ಗಸೂಚಿಗಳನ್ನು ಅನುಸರಿಸಲು ನಮ್ಮ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ, ಅಂತ್ಯದಲ್ಲಿ, ಅವುಗಳು ಇನ್ನೂ ಮೌಲ್ಯಾಧಾರಿತವಾಗಿವೆ, ವೈಯಕ್ತಿಕ ತೀರ್ಪುಗಳು ಹಾಗೂ ವಿವಿಧ ವ್ಯಾಖ್ಯಾನಿಗಳಿಗೆ ಮುಕ್ತವಾಗಿವೆ. 'ಮಗುವಿನ ಅತ್ಯುತ್ತಮ ಹಿತಾಸಕ್ತಿ'ಯ ಮಾರ್ಗಸೂಚಕ ತತ್ವವೂ ಸಹ ಅಂದಾಜಿಸಲು ಹಾಗೂ ಅನ್ವಯಿಸಲು ಸವಾಲಾಗಿರಬಹುದು.

ಇತರರು (ಮೂರನೇ ಪಾರ್ಟಿ ಪುನರ್‌ಮನನ) ಇಲ್ಲಿ ನೆರವಾಗಬಹುದು. ಕೆಲವು ರಾಷ್ಟ್ರಗಳಲ್ಲಿ, ಕಾನೂನಿನ ಅಗತ್ಯದ ಪ್ರಕಾರ ನಿಮ್ಮ ಸಂಶೋಧನಾ ವಿನ್ಯಾಸವನ್ನು ಸಾಂಸ್ಥಿಕ ವಿಮರ್ಶಾಮಂಡಳಿಯ ಅನುಮೋದನೆಗೆ ಸಲ್ಲಿಸಲು ನೀವು ಸಿದ್ಧರಾಗಿರಬೇಕು (ಶೈಕ್ಷಣಿಕ ಅಥವಾ ಸರ್ಕಾರಿ). ಒಂದು ವೇಳೆ ಕಾನೂನಾತ್ಮಕವಾಗಿ ಅಗತ್ಯವಿಲ್ಲದಿದ್ದರೂ ಸಹ ನೀವು ಇತರರಿಂದ ಪುನರ್‌ಮನನವನ್ನು ಪಡೆಯಬಹುದು – ಒಂದು ಸಮಿತಿಯನ್ನು ಸ್ಥಾಪಿಸುವುದು ಅಥವಾ ಬೆಂಬಲಾತ್ಮಕ ಹಾಗೂ ರಚನಾತ್ಮಕ ಹಿಮ್ಮಾಹಿತಿಯನ್ನು ನೀಡುವಂತಹ ಹೊರಗಿನ ತಜ್ಞರ ಗುಂಪನ್ನು ರಚಿಸುವ ಮೂಲಕ (ಕೆಲವೊಮ್ಮೆ ಸಂಶೋಧನಾ ಸಲಹಾ ಸಮಿತಿ ಎಂದು ಕರೆಯಲಾಗುತ್ತದೆ).

ಈ ಸಮಿತಿಗಳು ಒಂದು ಅಥವಾ ಬಹು ಸಂಶೋಧನಾ ಯೋಜನೆಗಳಿಗೆ ಬೆಂಬಲವನ್ನು ಒದಗಿಸಬಹುದು. ಸಮಿತಿಯು ತಜ್ಞರು, ಮಕ್ಕಳ ರಕ್ಷಣೆಯ ವಿಷಯವನ್ನು ಅಭ್ಯಸಿಸುವವರು, ಸಂಶೋಧನಾ ಕೌಶಲ್ಯಗಳು ಹಾಗೂ ಶಿಕ್ಷಣ ತಜ್ಞರನ್ನು ಒಳಗೊಂಡಿರಬೇಕು. ಇವರು ಹೊರಗಿನಿಂದಲೇ ಕೆಲಸ ಮಾಡಬಹುದು ಅಥವಾ ನಿಮ್ಮ ಸಂಶೋಧನಾ ಯೋಜನೆಗಳು ಹಾಗೂ ರಿಸ್ಕ್ ಪ್ರಯೋಜನಗಳ ವಿಶ್ಲೇಷಣಾ ಕೋಷ್ಟಕವನ್ನು ಪರಿಷ್ಕರಿಸಲು ಹಾಗೂ ಹಿಮ್ಮಾಹಿತಿಯನ್ನು ನೀಡಲು ಸ್ವತಃ ಭೇಟಿ ಮಾಡಬಹುದು.

## ಅನುಬಂಧ: ತೊಂದರೆಗಳು ಹಾಗೂ ಪ್ರಯೋಜನಗಳ ಕೋಷ್ಟಕ

**ಪರಿಣಾಮಗಳ ಬಾಕ್ಸಿನಲ್ಲಿ ಸಂಖ್ಯೆಗಳನ್ನು ಹಾಕಿರಿ**

1 = ಅತ್ಯಲ್ಪ
2 = ಸಣ್ಣ
3 = ಮಧ್ಯಮ
4 = ಪ್ರಮುಖ

### ಪ್ರಯೋಜನಗಳು

| | |
|---|---|
| **ಸಾಮಾಜಿಕ** ______ | ಪ್ರಯೋಜನಗಳ ವೃದ್ಧಿಗಾಗಿ ನೈತಿಕ ಕಾರ್ಯತಂತ್ರಗಳು : ______ |
| ಪರಿಣಾಮಗಳು | |
| **ಆರ್ಥಿಕ** ______ | ಪ್ರಯೋಜನಗಳ ವೃದ್ಧಿಗಾಗಿ ನೈತಿಕ ಕಾರ್ಯತಂತ್ರಗಳು : ______ |
| ಪರಿಣಾಮಗಳು | |
| **ಮಾನಸಿಕ** ______ | ಪ್ರಯೋಜನಗಳ ವೃದ್ಧಿಗಾಗಿ ನೈತಿಕ ಕಾರ್ಯತಂತ್ರಗಳು : ______ |
| ಪರಿಣಾಮಗಳು | |
| **ಕಾನೂನು** ______ | ಪ್ರಯೋಜನಗಳ ವೃದ್ಧಿಗಾಗಿ ನೈತಿಕ ಕಾರ್ಯತಂತ್ರಗಳು : ______ |
| ಪರಿಣಾಮಗಳು | |
| **ರಾಜಕೀಯ** ______ | ಪ್ರಯೋಜನಗಳ ವೃದ್ಧಿಗಾಗಿ ನೈತಿಕ ಕಾರ್ಯತಂತ್ರಗಳು : ______ |
| ಪರಿಣಾಮಗಳು | |
| **ಇತರೆ** ______ | ಪ್ರಯೋಜನಗಳ ವೃದ್ಧಿಗಾಗಿ ನೈತಿಕ ಕಾರ್ಯತಂತ್ರಗಳು : ______ |
| ಪರಿಣಾಮಗಳು | |

ಒಟ್ಟು

## ತೊಂದರೆಗಳು

**ಸಾಮಾಜಿಕ** ______________________

ತೊಂದರೆಗಳನ್ನು ಕಡಿಮೆಗೊಳಿಸಲು ನೈತಿಕ ಕಾರ್ಯತಂತ್ರಗಳು :______________________

ಪರಿಣಾಮಗಳು

**ಆರ್ಥಿಕ** ______________________

ತೊಂದರೆಗಳನ್ನು ಕಡಿಮೆಗೊಳಿಸಲು ನೈತಿಕ ಕಾರ್ಯತಂತ್ರಗಳು :______________________

ಪರಿಣಾಮಗಳು

**ಮಾನಸಿಕ** ______________________

ತೊಂದರೆಗಳನ್ನು ಕಡಿಮೆಗೊಳಿಸಲು ನೈತಿಕ ಕಾರ್ಯತಂತ್ರಗಳು :______________________

ಪರಿಣಾಮಗಳು

**ಕಾನೂನು**______________________

ತೊಂದರೆಗಳನ್ನು ಕಡಿಮೆಗೊಳಿಸಲು ನೈತಿಕ ಕಾರ್ಯತಂತ್ರಗಳು :______________________

ಪರಿಣಾಮಗಳು

**ರಾಜಕೀಯ** ______________________

ತೊಂದರೆಗಳನ್ನು ಕಡಿಮೆಗೊಳಿಸಲು ನೈತಿಕ ಕಾರ್ಯತಂತ್ರಗಳು :______________________

ಪರಿಣಾಮಗಳು

**ಇತರೆ** ______________________

ತೊಂದರೆಗಳನ್ನು ಕಡಿಮೆಗೊಳಿಸಲು ನೈತಿಕ ಕಾರ್ಯತಂತ್ರಗಳು :______________________

ಪರಿಣಾಮಗಳು

ಒಟ್ಟು

**ಪ್ರಯೋಜನಗಳಿಂದ ತೊಂದರೆಗಳನ್ನು ಕಳೆಯಿರಿ:** ____ – ____ = ____

328/1 ಫಾಯ ತಾಯ್ ರಸ್ತೆ, ರಾಚಥೇವಿ, ಬ್ಯಾಂಕಾಕ್, 10400, ಥಾಯ್‌ಲ್ಯಾಂಡ್
ದೂ: +662 215 3388 । ಇಮೇಲ್: info@ecpat.org
ವೆಬ್‌ಸೈಟ್: www.ecpat.org